ಉತ್ತರ ಭಾರತ, ದಕ್ಷಿಣ ಭಾರತ, ಶ್ರೀಲಂಕಾ

ಯುದ್ಧದ ಆನೆಯನ್ನು ಒಂದು ವ್ಯವಸ್ಥೆಯಾಗಿ ನಿರಂತರವಾಗಿ ಕಾಯ್ದುಕೊಳ್ಳುವುದು, ಹಾಗಾದರೆ, ಶಿಷ್ಯವೃತ್ತಿಯ ಮೂಲಕ ತಮ್ಮ ಕಸುಬನ್ನು ಕಲಿತ ಪ್ರಾಯೋಗಿಕ ಪರಿಣಿತರ ಅಂದರೆ, ಆನೆಯ ಬೇಟೆಗಾರ, ತರಬೇತುದಾರ, ಚಾಲಕ ಮತ್ತು ವೈದ್ಯರ - ಸಾಕಾರಗೊಳಿಸಿಕೊಂಡ ಜ್ಞಾನದ ಮೇಲೆ ಅವಲಂಬಿತವಾಗಿದೆ. ಈ ಸಾಕಾರಗೊಂಡ ಜ್ಞಾನವು ರಾಜ-ರಾಜರ ನಡುವಿನ ಮೈತ್ರಿ ಮತ್ತು ಯುದ್ಧ ಸಂಬಂಧಗಳ ಮೂಲಕ ಪ್ರಸಾರಗೊಂಡಾಗ ಯುದ್ಧದ ಆನೆಯ *ಹರಡುವಿಕೆಯು* ಸಂಭವಿಸಬಹುದು. ಪ್ರಸ್ತುತ, ಮತ್ತು ಮುಂದಿನ ಎರಡು ಅಧ್ಯಾಯಗಳಲ್ಲಿ ನಾನು ಮೊದಲಿಗೆ ಭಾರತ ಮತ್ತು ದಕ್ಷಿಣ ಏಷ್ಯಾದಲ್ಲಿ ಹೆಚ್ಚು ಸಾಮಾನ್ಯವಾಗಿ; ನಂತರ ಭಾರತದ ಪಶ್ಚಿಮದಲ್ಲಿ, ಕಾರ್ತೇಜ್ ಮತ್ತು ರೋಮ್ನಷ್ಟು ದೂರದವರೆಗೆ; ಮತ್ತು ಅಂತಿಮವಾಗಿ, ಆಗ್ನೇಯ ಏಷ್ಯಾದ ಭಾರತೀಕರಣಗೊಳ್ಳುತ್ತಿರುವ ರಾಜ್ಯಗಳ ಪೂರ್ವಕ್ಕೆ ಆ ಹರಡುವಿಕೆಯು ಹೇಗೆ ಸಂಭಿವಿಸಿದೆ ಎಂಬುದನ್ನು ನೋಡುತ್ತೇನೆ. ಈ ಪ್ರಸರಣವನ್ನು ಚಿತ್ರ 5.1 ರಲ್ಲಿ ಕ್ರಮಬದ್ಧವಾಗಿ ತೋರಿಸಲಾಗಿದೆ.

ಮಗಧದ ಉದಯ

ಯುದ್ಧದ ಆನೆಯನ್ನು ವೈದಿಕ ಕಾಲದ ಅಂತ್ಯದಲ್ಲಿ ಕಂಡುಹಿಡಿಯಲಾಗಿದೆ ಎಂಬುದು ನನ್ನ ವಾದ. ಕ್ರಿಸ್ತಪೂರ್ವ ಸುಮಾರು 500ರ ಹೊತ್ತಿಗೆ ವೈದಿಕ-ವಿರೋಧಿಗಳಾದ ಬೌದ್ಧ ಮತ್ತು ಜೈನ ಧರ್ಮಗಳು ಕಾಣಿಸಿಕೊಂಡಿದ್ದವು. ಅವುಗಳ ಇಬ್ಬರು ಸಂಸ್ಥಾಪಕರಾದ, ಬುದ್ಧ (ಜಾಗೃತನಾದವನು) ಮತ್ತು ಮಹಾವೀರರು (ಮಹಾ ನಾಯಕ) ಸಮಕಾಲೀನರಾಗಿದ್ದು ಆ ಅವಧಿಯ ಮಧ್ಯ ಗಂಗಾ ಕಣಿವೆಯಲ್ಲಿ- ಆನೆಗಳ ದೇಶದಲ್ಲಿ - ಜನಿಸಿದರು. ಯುದ್ಧದ ಆನೆ ಮತ್ತು ಚತುರಂಗ ಸೈನ್ಯವು ಬೌದ್ಧಧರ್ಮ ಮತ್ತು ಜೈನ ಧರ್ಮದ ಅಂಗೀಕೃತ ಪಠ್ಯಗಳಲ್ಲಿ, ಅಂದರೆ ಅವರ ಆರಂಭಿಕ ಬರಹಗಳಲ್ಲಿ, ಸ್ಪಷ್ಟವಾಗಿ ಗೋಚರಿಸುತ್ತವೆ. ಈ ಅಂಗೀಕೃತ ಪಠ್ಯಗಳು ಆ ಅವಧಿಯ ಪರಿಸ್ಥಿತಿಗಳನ್ನು ನಿಖರವಾಗಿ ತಿಳಿಸುತ್ತವೆ ಎಂದು ನಾವು ಖಚಿತವಾಗಿ ಹೇಳಲಾಗುವುದಿಲ್ಲ. ಆದಾಗ್ಯೂ, ಯುದ್ಧದ ಆನೆಯು ವೈದಿಕ ಕಾಲದ ಅಂತ್ಯದಲ್ಲಿ ಆವಿಷ್ಕಾರಗೊಂಡಿರುವುದಕ್ಕೆ ಬಲವಾದ ಸಾಕ್ಷಿಗಳು ಇರುವುದರಿಂದ, ಎರಡು ಹೊಸ ಧರ್ಮಗಳು ಹುಟ್ಟುವ ಹೊತ್ತಿಗೆ ಯುದ್ಧದ ಆನೆ ಮತ್ತು ಚತುರಂಗ ಸೈನ್ಯವು ಉತ್ತರ ಭಾರತದಲ್ಲಿ ಸ್ಥಾಪಿಸಲ್ಪಟ್ಟ ವ್ಯವಸ್ಥೆಗಳಾಗಿದ್ದವು ಎಂದು ನಾವು ಒಪ್ಪಿಕೊಳ್ಳಬಹುದು.

ಚಿತ್ರ 5.1: ಯುದ್ಧದ ಆನೆಯ ಪ್ರಸರಣ

ಉತ್ತರ ಭಾರತ

ಕ್ರಿಸ್ತಪೂರ್ವ 1000-500

ಪಶ್ಚಿಮ: ಕ್ರಿಸ್ತಪೂರ್ವ 500ರಿಂದ

ಇರಾನ್

ಈಜಿಪ್ಟ್ ಮತ್ತು ಸಿರಿಯಾ

ಕಾರ್ತೇಜ್

ರೋಮ್

ಘಜ್ನಿ

ಪೂರ್ವ: ಕ್ರಿಸ್ತಪೂರ್ವ 100ರಿಂದ

ಕಾಂಬೋಡಿಯಾ

ಥೈಲ್ಯಾಂಡ್

ಮಯನ್ಮಾರ್

ಲಾವೋಸ್

ವಿಯಟ್ನಾಮ್

ಜಾವಾ

ದಕ್ಷಿಣ: ಕ್ರಿಸ್ತಪೂರ್ವ 250 ರಿಂದ

ದಕ್ಷಿಣ ಭಾರತ

ಶ್ರೀಲಂಕಾ

ಮುಂದಿನ ಎರಡು ಶತಮಾನಗಳಾದ ಕ್ರಿಸ್ತಪೂರ್ವ 500-300ರಲ್ಲಿ ಆದ ಮಹೋನ್ನತ ರಾಜಕೀಯ ಬೆಳವಣಿಗೆಯು, ಪ್ರಮುಖ ರಾಜ್ಯಗಳ ನಡುವಿನ ತೀವ್ರವಾದ ಅಂತರರಾಜ್ಯ ಯುದ್ಧವಾಗಿತ್ತು. ಮೂಲಗಳಲ್ಲಿ ಇದನ್ನು *ಮಹಾಜನಪದಗಳು* ಎಂದು ಕರೆಯಲಾಗುತ್ತದೆ. ಇದರ ಪರಿಣಾಮವಾಗಿ ಆ ರಾಜ್ಯಗಳಲ್ಲಿ ಒಂದಾದ ಮಗಧ ಸಾಮ್ರಾಜ್ಯದ ಅಡಿಯಲ್ಲಿ ಈ ಎಲ್ಲಾ ರಾಜ್ಯಗಳ ಏಕೀಕರಣವಾಯಿತು. ಈ ರಾಜ್ಯವು ತನ್ನ ನೆರೆಹೊರೆಯನ್ನು ಆಕ್ರಮಿಸಿಕೊಂಡು ಹೆಚ್ಚು ಕಡಿಮೆ ಇಡೀ ಭಾರತವನ್ನು ಒಳಗೊಂಡ ದೊಡ್ಡ ಸಾಮ್ರಾಜ್ಯವಾಗಿ ಬೆಳೆಯಿತು. ತುಲನಾತ್ಮಕವಾಗಿ ನೋಡಿದಾಗ ಈ ಬೆಳವಣಿಗೆಯು ಸ್ವಲ್ಪಮಟ್ಟಿಗೆ ಚೀನಾದಲ್ಲಿ ಆದ ಬೆಳವಣಿಗೆಯಂತೆಯೇ ಇತ್ತು. ಅಂದರೆ, ವಾರಿಂಗ್ ಸ್ಟೇಟ್ಸ್ ಎಂಬ ಅವಧಿಯಲ್ಲಿನ ಅಂತರರಾಜ್ಯ ಪೈಪೋಟಿ, ನಂತರ, ಮೊದಲು ಕಿನ್, ನಂತರ ಹಾನ್ನ ಅಡಿಯಲ್ಲಿ, ಮೌರ್ಯರ

ಸಾಮ್ರಾಜ್ಯ ಸ್ಥಾಪನೆಯ ಸ್ವಲ್ಪ ನಂತರದಲ್ಲಿ, ಬಲವಂತವಾಗಿ ನಡೆದ ರಾಜ್ಯಗಳ ಏಕೀಕರಣ. ಭಾರತದಲ್ಲಿ ಅಂತರರಾಜ್ಯ ಯುದ್ಧವು, ಯುದ್ಧದ ಆನೆಯನ್ನೂ ಒಳಗೊಂಡಂತೆ ಚತುರಂಗ ಸೈನ್ಯದ ಶ್ರೇಷ್ಠ ಅವಧಿಯಾಗಿದ್ದು, ಒಳ್ಳೆಯ ಫಲಿತಾಂಶವನ್ನು ಪಡೆಯಲು ಕುದುರೆಗಳು ಮತ್ತು ಆನೆಗಳ ನಿಯಂತ್ರಣವು ನಿರ್ಣಾಯಕ ಎಂದು ಯೋಚಿಸಲು ಎಲ್ಲ ಕಾರಣಗಳೂ ಇವೆ. ಉತ್ತರ ಭಾರತದ ಯುದ್ಧ ರಾಜ್ಯಗಳನ್ನು ಏಕೀಕರಿಸಿದ ಮಗಧದ ಯಶಸ್ಸಿನ ಪ್ರಮುಖ ಕಾರಣವೆಂದರೆ, ಅದು ತನ್ನ ಪ್ರತಿಸ್ಪರ್ಧಿಗಳಿಗಿಂತ ಹೆಚ್ಚಾಗಿ ಅಧಿಕ ಮತ್ತು ಉತ್ತಮವಾದ ಯುದ್ಧದ ಆನೆಗಳ ನಿಯಂತ್ರಣ ಮಾಡಿದ್ದು ಎಂದು ನಾನು ವಾದಿಸುತ್ತೇನೆ. ಹದಿನಾರು *ಮಹಾಜನಪದಗಳ* ಪಟ್ಟಿಯ ವಿಶ್ಲೇಷಣೆಯು ಇದನ್ನು ತೋರಿಸುತ್ತದೆ.

ಬುದ್ಧ ಮತ್ತು ಮಹಾವೀರರ ಕಾಲದ ಉತ್ತರ ಭಾರತದ ರಾಜಕೀಯ ನಕ್ಷೆಯನ್ನು ಬೌದ್ಧ ಧರ್ಮಗ್ರಂಥದಲ್ಲಿ ಹದಿನಾರು ದೇಶಗಳ (*ಮಹಾಜನಪದಗಳು*) ವಂಶಮೂಲ ಪಟ್ಟಿಯೊಂದರಲ್ಲಿ ಗ್ರಹಿಸಲಾಗಿದೆ (ಚಿತ್ರ 5.2ನ್ನು ನೋಡಿ). ಅವು ಪ್ರಾದೇಶಿಕ ಘಟಕಗಳಾಗಿದ್ದರೂ, ಜನಾಂಗೀಯವೂ ಆಗಿವೆ. ಏಕೆಂದರೆ ಅವುಗಳ ಹೆಸರುಗಳು ಅವುಗಳ ಜನರ ಹೆಸರುಗಳ ಬಹುವಚನ ರೂಪವೇ ಆಗಿವೆ. ಹೀಗಾಗಿ, ಅವುಗಳಲ್ಲಿ ಒಂದಾದ ಮಗಧ ರಾಜ್ಯವನ್ನು "ಮಗಧರು" (ಒಂದು ನಿರ್ದಿಷ್ಟ ಸ್ಥಳದಲ್ಲಿ ವಾಸಿಸುವ ಜನರು) ಎಂದು ಪಟ್ಟಿ ಮಾಡಲಾಗಿದೆ. ಈ ಪಟ್ಟಿಯ ಪ್ರಾಚೀನತೆ ಮತ್ತು ಸತ್ಯಾಸತ್ಯತೆಯು, ಇದೇ ರೀತಿಯ ಪಟ್ಟಿಯನ್ನು ಹೊಂದಿರುವ ಜೈನ ಧರ್ಮಗ್ರಂಥದಿಂದ ದೃಢೀಕರಿಸಲ್ಪಟ್ಟಿದೆ. ಜನರ ಹೆಸರುಗಳಿಂದ ದೇಶಗಳ ಹೆಸರುಗಳಾಗಿ ಪರಿವರ್ತಿಸಲಾದ, ಸಂಸ್ಕೃತ ರೂಪದ, ಬೌದ್ಧ ಪಟ್ಟಿಯು ಈ ಕೆಳಗಿನಂತಿದೆ.

ಹದಿನಾರು *ಮಹಾಜನಪದಗಳು*

1.	ಅಂಗ	9.	ಕುರು
2.	ಮಗಧ	10.	ಪಾಂಚಾಲ
3.	ಕಾಶಿ	11.	ಮತ್ಸ್ಯ
4.	ಕೋಸಲ	12.	ಸುರಸೇನ
5.	ವಜ್ಜಿ	13.	ಅಸ್ಮಕ
6.	ಮಲ್ಲ	14.	ಅವಂತಿ
7.	ಚೇದಿ	15.	ಗಾಂಧಾರ
8.	ವತ್ಸ	16.	ಕಾಂಬೋಜ

ಪಟ್ಟಿಯು ಕಾಣುತ್ತಿರುವಂತೆಯೇ ಸರಳವಾಗಿದ್ದು, ಹಲವು ರೀತಿಗಳಲ್ಲಿ ರಚನೆಯಾಗಿದೆ. ಮೊದಲಿಗೆ, ಒಟ್ಟಾರೆಯಾಗಿ ಅದರ ದಿಕ್ಕು ಪೂರ್ವದಿಂದ ಪಶ್ಚಿಮಕ್ಕೆ ಇದ್ದು, ಮಧ್ಯದಲ್ಲಿನ ಗಂಗಾ ಕಣಿವೆಯಲ್ಲಿ ಅಂಗ ಮತ್ತು ಮಗಧದಿಂದ ಪ್ರಾರಂಭವಾಗಿ, ಸಿಂಧೂ ಕಣಿವೆಯಲ್ಲಿ ಗಾಂಧಾರ ಮತ್ತು ಕಾಂಬೋಜದಿಂದ ಕೊನೆಗೊಳ್ಳುತ್ತದೆ. ಅಂದರೆ, ಇದು ಉತ್ತರ ಭಾರತದ ಪೂರ್ವ ಭಾಗದಲ್ಲಿರುವ ಆನೆ ದೇಶದಿಂದ ಪಶ್ಚಿಮ ಮತ್ತು ವಾಯುವ್ಯದಲ್ಲಿನ ಕುದುರೆ ದೇಶಕ್ಕೆ ಸಾಗುತ್ತದೆ. ಅದರ ರಾಜನಿಗೆ ಕಲ್ಪನೆಗೆ ಮೀರಿದ ದೊಡ್ಡ ಆನೆಗಳನ್ನು ಉಡುಗೊರೆಯಾಗಿ ನೀಡಿರುವ ಬಗ್ಗೆ ಉಲ್ಲೇಖವನ್ನು ಹೊಂದಿರುವ ವೈದಿಕ ಕಾಲದ ಅಂತ್ಯದ ಪಠ್ಯಗಳು ಮತ್ತು ನಂತರದಲ್ಲಿ ಬಂದ ಆನೆ ವಿಜ್ಞಾನದ ಪಠ್ಯಗಳೆರಡರಲ್ಲೂ ಅಂಗ ದೇಶವು, ನಮಗೆ ತಿಳಿದಿರುವಂತೆ, ಆನೆಗಳೊಂದಿಗೆ ಬಲವಾದ ಸಂಬಂಧವನ್ನು ಹೊಂದಿದೆ. ಇವುಗಳು ಆನೆಗಳನ್ನು ಮೊದಲು ಪಳಗಿಸಿದವನು ಎಂದು ಅಂಗ ದೇಶದ ರಾಜ ರೋಮಪಾದನನ್ನು ಗುರುತಿಸಿದರೆ, ಆನೆ ವಿಜ್ಞಾನದ ಕರ್ತೃ ಎಂಬ ಮನ್ನಣೆಯನ್ನು ರಾಜನಿಗೆ ಅದನ್ನು ಬೋಧಿಸಿದ ಪಾಲಕಪ್ಯ ಋಷಿಗೆ ನೀಡುತ್ತವೆ. *ಮಹಾಭಾರತ*ದಲ್ಲಿ, ಸಾಮಾನ್ಯವಾಗಿ ಪೌರಸ್ತ್ಯರು ಆನೆ ಚಾಲಕರು ಮತ್ತು ಆನೆ ಹೋರಾಟಗಾರರಾಗಿದ್ದಾರೆ. ಹದಿನಾರು *ಮಹಾಜನಪದಗಳ* ಪೈಕಿ ಮಗಧವು ಪೂರ್ವಾಭಿಮುಖ ಸ್ಥಾನದಲ್ಲಿದ್ದ ಕಾರಣದಿಂದಾಗಿ, ಅದರ ಪಶ್ಚಿಮದ ನೆರೆಹೊರೆಯವರಿಗೆ, ಅಂದರೆ, ಪಟ್ಟಿಯಲ್ಲಿನ ಹದಿನಾಲ್ಕು ದೇಶಗಳಿಗೆ ಹೋಲಿಸಿದರೆ ಆನೆಯ ಪ್ರಯೋಜನವನ್ನು ಹೊಂದಿತ್ತು ಎಂಬುದಾಗಿ ನಾನು ಇದರಿಂದ ಊಹಿಸುತ್ತೇನೆ. ಇದು ಮೊದಲ ಅಂಶ.

ಚಿತ್ರ 5.2: ಹದಿನಾರು *ಮಹಾಜನಪದಗಳ* ನಕ್ಷೆ

ಅನೇಕ *ಮಹಾಜನಪದಗಳು* ರಾಜ್ಯಗಳಾಗಿದ್ದರೂ(kingdoms), ಜೈನ ಧರ್ಮದ ಸಂಸ್ಥಾಪಕರಾದ ಮಹಾವೀರರು ಜನಿಸಿದ ಬುಡಕಟ್ಟುಗಳ ಒಕ್ಕೂಟವಾದ ವಿದೇಹ, ಮತ್ತು ಮಲ್ಲಗಳಂತಹ ಕೆಲವು ಗಣರಾಜ್ಯಗಳಾಗಿದ್ದವು. ಬುದ್ಧನು ಜನಿಸಿದ ಶಾಕ್ಯರು ಸಹ ಗಣರಾಜ್ಯ ಸರ್ಕಾರವನ್ನು ಹೊಂದಿದ್ದರೂ ಸಹ ಅದು ಪಟ್ಟಿಯಲ್ಲಿಲ್ಲ. ಇದಕ್ಕೆ ಕಾರಣ, ಬಹುಶಃ ಅದರ ಸಣ್ಣ ಗಾತ್ರವಾಗಿರಬಹುದು ಅಥವಾ ಅದು ದೊಡ್ಡ ಮತ್ತು ಹೆಚ್ಚು ಶಕ್ತಿಶಾಲಿ ಸಾಮ್ರಾಜ್ಯವಾದ ಕೋಸಲದಿಂದ ಆಕ್ರಮಿಸಲ್ಪಟ್ಟಿತ್ತು ಎಂಬುದಾಗಿರಬಹುದು. ಮುಂದಿನ ವಿಭಾಗದಲ್ಲಿ ನಾನು, ಗಣರಾಜ್ಯಗಳಿಗಿಂತ ರಾಜ್ಯಗಳು ಯುದ್ಧದ ಆನೆಗಳನ್ನು ಸಂಗ್ರಹಿಸಲು ಸಮರ್ಥವಾಗಿದ್ದವು ಎಂದು ತೋರಿಸುತ್ತೇನೆ. ಹೀಗಾಗಿ, ಮಗಧ ರಾಜ್ಯವು ತನ್ನ ಸುತ್ತಮುತ್ತಲಿನ ಗಣರಾಜ್ಯಗಳಿಗಿಂತ ಹೆಚ್ಚಿನ ಪ್ರಯೋಜನವನ್ನು ಹೊಂದಿತ್ತು. ಇದು ಎರಡನೇ ಅಂಶವಾಗಿದೆ.

ಹದಿನಾರು *ಮಹಾಜನಪದಗಳ* ಪಟ್ಟಿಯು ಒಂದು ಸಿದ್ಧಮಾದರಿಯಾಗಿತ್ತು ಮತ್ತು ಆ ಕಾಲದ ರಾಜಕೀಯ ಪರಿಸ್ಥಿತಿಯೊಂದಿಗೆ ನಿಖರವಾಗಿ ಹೊಂದಿಕೆಯಾಗುತ್ತಿರಲಿಲ್ಲ ಎಂದು ಭಾವಿಸಲು ಕಾರಣವಿದೆ. ಬುದ್ಧ ಮತ್ತು ಮಹಾವೀರರಿಬ್ಬರೂ ಮಗಧದ ರಾಜ ಬಿಂಬಿಸಾರ ಮತ್ತು ಅವನ ಮಹತ್ವಾಕಾಂಕ್ಷೆಯುಳ್ಳ ಮತ್ತು ಉತ್ತರಾಧಿಕಾರಿಯಾದ ಮಗ, ಅಜಾತಶತ್ರು, ಇವರನ್ನು ಭೇಟಿಯಾದರು: ಈ ಇಬ್ಬರು ರಾಜರ ಐತಿಹಾಸಿಕತೆಯನ್ನು ನಾವು ಸಮಂಜಸವಾಗಿ ಅನುಮಾನಿಸಲಾಗುವುದಿಲ್ಲ. ಆದರೆ ಆ ವೇಳೆಗಾಗಲೇ ಮಗಧವು ಅಂಗ ದೇಶವನ್ನು ಸ್ವಾಧೀನಪಡಿಸಿಕೊಂಡಿತ್ತು ಮತ್ತು ರಾಜಕುಮಾರ ಅಜಾತಶತ್ರುವು ಅದರ ಪ್ರಾಂತ್ಯಾಧಿಪತಿಯಾಗಿದ್ದನು. ಆನೆಗಳಿಗೆ ಹೆಸರುವಾಸಿಯಾದ ತನ್ನ ಕ್ಷೇತ್ರಕ್ಕೆ ಅಂಗ ದೇಶವನ್ನು ಸೇರ್ಪಡೆ ಮಾಡಿಕೊಂಡದ್ದು, ಈ ವಿಷಯದಲ್ಲಿ ಮಗಧಕ್ಕೆ ಹೆಚ್ಚು ಪ್ರಯೋಜನಕಾರಿಯಾಗಿರಬಹುದು. ಅಂತೆಯೇ, ಕೋಸಲವು ಮಲ್ಲ ಮತ್ತು ಕಾಶಿಯನ್ನು ಆಕ್ರಮಿಸಿಕೊಂಡಿತ್ತು. ಇದು ಮೂರನೇ ಅಂಶವಾಗಿದೆ.

ಅಂತಿಮವಾಗಿ, ಮಗಧವು ಕೋಸಲ, ವತ್ಸ ಮತ್ತು ಅವಂತಿಯೊಂದಿಗೆ ಬೌದ್ಧ ಧರ್ಮಗ್ರಂಥದ ಇತರ ಭಾಗಗಳಲ್ಲಿನ *ಮಹಾಜನಪದಗಳ* ಕಿರು ಪಟ್ಟಿಯಲ್ಲಿ ಕಾಣಿಸಿಕೊಳ್ಳುತ್ತದೆ. ಹದಿನಾರು ದೇಶಗಳ ಪೈಕಿ, ಈ ನಾಲ್ಕು ದೇಶಗಳು, ಆ ಸಮಯದ ದೊಡ್ಡ ಮತ್ತು ಅತ್ಯಂತ ಶಕ್ತಿಶಾಲಿ ದೇಶಗಳಾಗಿವೆ ಎಂಬುದು ಸ್ಪಷ್ಟವಾಗಿದೆ. ಮತ್ತೊಮ್ಮೆ, ಮಗಧವು ನಾಲ್ಕು ದೇಶಗಳ ಪೈಕಿ ಪೂರ್ವಕ್ಕಿದ್ದು, ಆನೆಗಳಿಗೆ ಸಂಬಂಧಿಸಿದಂತೆ ಅನುಕೂಲಕರ ಸ್ಥಾನದಲ್ಲಿತ್ತು. ಹೀಗೆ, ನಾಲ್ಕು ವಿಭಿನ್ನ ರೀತಿಯಲ್ಲಿ ನೋಡಿದಾಗಲೂ, ಹದಿನಾರು *ಮಹಾಜನಪದಗಳ* ಪಟ್ಟಿಯು ಆನೆಗಳಿಗೆ ಸಂಬಂಧಿಸಿದಂತೆ ಮಗಧವು ಬಹಳ ಅನುಕೂಲಕರವಾಗಿ ಇರುವುದನ್ನು ನಿರಂತರವಾಗಿ ತೋರಿಸುತ್ತದೆ.

ಬೌದ್ಧ ಮತ್ತು ಜೈನ ಧರ್ಮಗ್ರಂಥಗಳಲ್ಲಿ ಅಜಾತಶತ್ರುವನ್ನು ಬಿಂಬಿಸಿರುವ ಪ್ರಕಾರ, ಅವನು ನಿರ್ದಯಿ ಮತ್ತು ಮಹತ್ವಾಕಾಂಕ್ಷಿಯಾಗಿದ್ದನು. ಅವನು ಬುದ್ಧ ಮತ್ತು ಮಹಾವೀರರ ಪೋಷಕನಾಗಿದ್ದರೂ ಸಹ, ಎರಡೂ ಧರ್ಮಗ್ರಂಥಗಳೂ ಅವನ ಪಾಪಗಳನ್ನು ನಿರ್ದಿಷ್ಟಪಡಿಸದೆ ಇರುವುದಿಲ್ಲ. ಸಿಂಹಾಸನದ ಉತ್ತರಾಧಿಕಾರಿಯಾಗುವಲ್ಲಿನ ಅಸಹನೆಯಿಂದ, ಅವನು ತನ್ನ ತಂದೆಯನ್ನು ಕೊಂದು ಉತ್ತರ ಮತ್ತು ಪಶ್ಚಿಮದ ತನ್ನ ನೆರೆಹೊರೆಯವರಾದ ವಿದೇಹ ಮತ್ತು ಕೋಸಲಗಳೊಂದಿಗೆ ಯುದ್ಧವನ್ನು ಮಾಡಿದನು. ವಿದೇಹದ ವಿರುದ್ಧ ಅವನು ಯಶಸ್ವಿಯಾದ ಪರಿಣಾಮವಾಗಿ ಮಗಧವು ಮಧ್ಯ ಗಂಗೆಯ ಉತ್ತರ ಮತ್ತು ದಕ್ಷಿಣ ದಂಡೆಗಳನ್ನು ಒಪ್ಪಿಸುವಂತೆ ಆಜ್ಞಾಪಿಸಿತು. ಆದಾಗ್ಯೂ, ಕಾಶಿಯ ನಡುವೆ ಬರುವ ಪ್ರದೇಶವೊಂದರ ವಿಷಯದಲ್ಲಿ ಕೋಸಲದೊಂದಿಗಿನ ವಿವಾದದಲ್ಲಿ

ಸೋಲನ್ನುಂಡ ಅವನು, ಬೌದ್ಧ ಧರ್ಮಗ್ರಂಥದ ಪ್ರಕಾರ ಅವನ ಕಾಲಾಳುಗಳು, ಕುದುರೆಗಳು, ರಥಗಳು ಮತ್ತು ಆನೆಗಳು-ಅವನ ಚತುರಂಗ ಸೈನ್ಯದೊಂದಿಗೆ ಸೆರೆಗೆ ಸಿಕ್ಕಿದ್ದನು. ಆದರೂ ಕೋಸಲದ ರಾಜ ಅವನೊಂದಿಗೆ ರಾಜಿ ಮಾಡಿಕೊಂಡು ಅವನನ್ನು ಬಿಡುಗಡೆ ಮಾಡಿದನು. ಅಜಾತಶತ್ರುವನ್ನು ಮಣಿಸಲು ಯಾವ ವ್ಯೂಹವನ್ನು ಬಳಸಬೇಕು ಎಂಬುದರ ಕುರಿತು ಬೌದ್ಧ ಸನ್ಯಾಸಿಗಳ ನಡುವೆ ನಡೆದ ಸಂಭಾಷಣೆಯನ್ನು ಕದ್ದಾಲಿಕೆ ಮಾಡಿದ್ದರಿಂದಲೇ ಕೋಸಲ ರಾಜನ ವಿಜಯವು ಸಾಧ್ಯವಾಯಿತು ಎಂದು ನಂತರದ ವ್ಯಾಖ್ಯಾನದ ಒಂದು ಭಾಗದಲ್ಲಿದೆ. ಕೋಸಲ ರಾಜನು ಹಿರಿಯ ಸನ್ಯಾಸಿ ಧನುಗಹತಿಸ್ಸನ ಸಲಹೆಯ ಮೇರೆಗೆ ಬಂಡಿ ವ್ಯೂಹವನ್ನು ರಚಿಸಿ ಯಶಸ್ವಿಯಾದನು.

ಕ್ರಿಸ್ತಪೂರ್ವ 500ರ ಸುಮಾರಿಗೆ ಮಗಧವು ಅಂಗ ಮತ್ತು ವಿದೇಹಗಳನ್ನು ಆಕ್ರಮಿಸಿಕೊಂಡದ್ದನ್ನು ಹೊರತುಪಡಿಸಿದರೆ, ಉಳಿದ *ಮಹಾಜನಪದಗಳನ್ನು* ಅದು ಯಾವ ರೀತಿ ಆಕ್ರಮಿಸಿಕೊಂಡಿತು ಎಂಬುದು ನಮಗೆ ತಿಳಿದಿಲ್ಲ. ಆದರೆ ಅಶೋಕನ ಶಾಸನಗಳ ಕೆತ್ತನೆಯ ಸ್ಥಳಗಳು ಮತ್ತು ಅದರಲ್ಲಿ ವಿವರಿಸಲಾಗಿರುವ ಮೌರ್ಯ ಸಾಮ್ರಾಜ್ಯದ ಪ್ರಾಂತ್ಯಗಳು, ಮಗಧವು ಎಲ್ಲಾ ಹದಿನಾರು ರಾಜ್ಯಗಳ ಮೇಲೂ ವಿಜಯವನ್ನು ಸ್ಥಾಪಿಸಿ, ಇಂದಿನ ಅಫ್ಘಾನಿಸ್ತಾನ ಮತ್ತು ದಕ್ಷಿಣ ಭಾರತವನ್ನೂ ಮೀರಿ ಬೆಳೆದಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ (ಚಿತ್ರ 5.3).

ಈ ಇತಿಹಾಸದಲ್ಲಿ, ಗಣರಾಜ್ಯಗಳಿಗಿಂತ ಹೆಚ್ಚಾಗಿ ರಾಜತ್ವವು ಬಹಳ ವಿಸ್ತಾರವಾಗಿದೆ. ಗಣರಾಜ್ಯಗಳು ಯಾವುದೇ ರೀತಿಯಲ್ಲಿಯೂ ಯುದ್ಧರಹಿತವಾಗಿ ಇರಲಿಲ್ಲ; ಹಾಗೆ ನೋಡಿದರೆ, *ಅರ್ಥಶಾಸ್ತ್ರ*ವು ಅವರನ್ನು ಅತ್ಯಂತ ಅಸಾಧಾರಣ ಶತ್ರುಗಳು ಮತ್ತು ಅತ್ಯಂತ ಅಪೇಕ್ಷಣೀಯ ಮಿತ್ರರು ಎಂದು ಪರಿಗಣಿಸಿದೆ. ಅವು ಪ್ರಾಂತ್ಯಗಳನ್ನು ವಶಪಡಿಸಿಕೊಂಡಿದ್ದು, ಗುಲಾಮರನ್ನು ಹೊಂದಿದ್ದವು. ಆದರೆ ಅವು ವಿದೇಶಿ ಜನರು ಮತ್ತು ಪ್ರಾಂತ್ಯಗಳನ್ನು ಆಕ್ರಮಿಸಿಕೊಂಡ ಅಥವಾ ಬಯಸಿದ ಪ್ರಮಾಣದಲ್ಲಿ ಅಂತರ್ಗತ ಮಿತಿಗಳನ್ನು ಹೊಂದಿದ್ದಂತೆ ತೋರುತ್ತದೆ. ವಿದೇಹವು ಗಣರಾಜ್ಯಗಳ ವಿಜಯಕ್ಕಿಂತ ಹೆಚ್ಚಾಗಿ ಅವುಗಳ ಒಕ್ಕೂಟದ ಬೆಳವಣಿಗೆಗೆ ಉದಾಹರಣೆಯಾಗಿದೆ; ಬಹುಶಃ ಇದು ಈ ರೀತಿಯ ರಾಜಕೀಯದ ಅಂತರ್ಗತ ಪ್ರವೃತ್ತಿಯಾಗಿರಬಹುದು. ಇದಕ್ಕೆ ವ್ಯತಿರಿಕ್ತವಾಗಿ, ಈ ಅವಧಿಯ ಸಾಮ್ರಾಜ್ಯಗಳು ವಿಸ್ತರಣೆಗೊಳ್ಳಲು ಪ್ರಚೋದಿಸಲ್ಪಟ್ಟಿದ್ದವು ಮತ್ತು ಅದರಿಂದಲೇ ಘರ್ಷಿಸಲು ಮತ್ತು ಆಕ್ರಮಿಸಲು ಅಥವಾ ಆಕ್ರಮಿಸಲ್ಪಡಲು ಸಹ ಪ್ರಚೋದಿತವಾಗಿದ್ದವು. ರಾಜತ್ವವು ವಿಶೇಷವಾಗಿ ಯುದ್ಧದ ಆನೆಗಳು ಮತ್ತು ಚತುರಂಗ ಸೈನ್ಯದೊಂದಿಗೆ, ಹಾಗೂ ಯುದ್ಧ ಮತ್ತು ರಾಜರ ಮೈತ್ರಿಗಳೊಂದಿಗೆ ಸಂಬಂಧ ಹೊಂದಿದ್ದರಿಂದ, ಈ ಮಾದರಿಯನ್ನು ತ್ವರಿತವಾಗಿ

ಅಳವಡಿಸಿಕೊಂಡಿರಬಹುದು ಎಂದು ನಾವು ಭಾವಿಸುತ್ತಾ ಚತುರಂಗ ಸೈನ್ಯ ಮತ್ತು ಅದರ ಯುದ್ಧದ ಆನೆಗಳು ಮಹತ್ವಾಕಾಂಕ್ಷೆಯುಳ್ಳ ರಾಜನಿಗೆ ಪೂರ್ಣ ಬಲವನ್ನು ನೀಡಲು ಯೋಗ್ಯವೆಂಬಂತೆ ಬಿಂಬಿಸಬಹುದು.

ಈ ಮಾದರಿಯು ಮಗಧಕ್ಕೆ ಅನುಕೂಲಕರವಾಗಿ ಪರಿಣಮಿಸಿದ ಮಾದರಿಯಾಗಿದ್ದು, ಪೂರ್ವದ ಪ್ರಾಚ್ಯ-ವನ ಕಾಡಿನಲ್ಲಿದ್ದ ಉತ್ತಮ ಸಂಖ್ಯೆಯ ಮತ್ತು ಗುಣಮಟ್ಟದ ಆನೆಗಳಿಗೆ ಪ್ರವೇಶಿಕೆಯನ್ನು ಹೊಂದಿತ್ತು. ಜೊತೆಗೆ, ಕುದುರೆಗಳನ್ನು ಸಹ ಪಡೆದುಕೊಳ್ಳಬಹುದೆಂದು ಸದಾ ಭಾವಿಸಲಾಗಿತ್ತು. ಯುದ್ಧದ ಆನೆ ಮತ್ತು ಅದು ಸಾಧ್ಯವಾಗಿಸಿದ ಚತುರಂಗ ಸೈನ್ಯದ ಮಾದರಿಯು ನಂದರು ರಚಿಸಿದ ಮತ್ತು ಮೌರ್ಯರಿಂದ ವಿಸ್ತರಿಸಲ್ಪಟ್ಟ ಸಾಮ್ರಾಜ್ಯದಲ್ಲಿ ಸಂಭವಿಸಿದ ಅಂತರ್-ರಾಜ್ಯ ಯುದ್ಧಗಳಿಗೆ ಉತ್ತೇಜಕವಾಗಿತ್ತು. ಇತಿಹಾಸಕಾರರು ಇತರ ರಾಜ್ಯಗಳ ಮೇಲಿನ ಮಗಧದ ಯಶಸ್ಸು, ಮತ್ತು ಅದು ಕಬಳಿಸಿದ ಗಣರಾಜ್ಯಗಳ ಕುರಿತು ದೀರ್ಘಕಾಲ ಚರ್ಚಿಸಿದ್ದಾರೆ. ಆದರೆ ಮುಂದಿಟ್ಟ ಸಂಭವನೀಯ ಕಾರಣಗಳು ಅದರ ಶಕ್ತಿಯ ಮೂಲಭೂತ ಸಾಧನವಾದ ಸೈನ್ಯದ ವಿಶ್ಲೇಷಣೆಯನ್ನು ಒಳಗೊಂಡಿಲ್ಲ. ಆನೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ನಾನು ಮತ್ತೆ ಹೇಳುತ್ತೇನೆ. ಯುದ್ಧದ ಆನೆ ಮತ್ತು ಕಾಡು ಆನೆಗಳ ಪೂರೈಕೆಯಲ್ಲಿ ಉತ್ತರ ಭಾರತದ ಪೂರ್ವ ಪ್ರದೇಶದ ಶ್ರೇಷ್ಠತೆಯು, ಮಗಧಕ್ಕೆ ತನ್ನ ಪ್ರತಿಸ್ಪರ್ಧಿಗಳ ವಿರುದ್ಧ ಮುನ್ನಡೆಯನ್ನು ನೀಡಿತು ಎಂದು ನಾನು ಪ್ರಸ್ತಾಪಿಸುತ್ತೇನೆ.

ಚಿತ್ರ 5.3: ಮೌರ್ಯ ಸಾಮ್ರಾಜ್ಯದ ನಕ್ಷೆ



ನಂದರು ಮತ್ತು ಅವರ ಸಮಕಾಲೀನರು

ಸಂಸ್ಕೃತ ಮಾತನಾಡುವ ಜನರು ಒಟ್ಟಾರೆಯಾಗಿ ಸಿಂಧೂ ಕಣಿವೆಯಿಂದ ಗಂಗಾ ಕಣಿವೆಯವರೆಗೆ ಪೂರ್ವಕ್ಕೆ ಹರಡಿಕೊಂಡಿದ್ದರು. ಸಿಂಧೂ ಕಣಿವೆ, ಗಂಗಾ ಕಣಿವೆಯ ಮೇಲ್ಭಾಗ ಮತ್ತು ಗಂಗಾ ಮತ್ತು ಯಮುನಾ ನದಿಗಳು ಒಟ್ಟುಗೂಡುವ ನಡುವಣ ಪ್ರದೇಶಗಳು ವೈದಿಕ ಧರ್ಮದ ಕೇಂದ್ರಭಾಗವಾಗಿದ್ದವು. ಆಧ್ಯಾತ್ಮಿಕವಾಗಿ ಮತ್ತು ಪರಿಸರೀಯವಾಗಿ ಇದನ್ನು ಕೃಷ್ಣಮೃಗ ಅಥವಾ ಕಪ್ಪು ಹುಲ್ಲೆ ಸಂಚರಿಸುವ ಭೂಮಿ ಎಂದು ಗುರುತಿಸಲಾಗಿದೆ. ಕೃಷ್ಣಮೃಗವು ಒಣ ಹುಲ್ಲುಗಾವಲುಗಳುಳ್ಳ ಬಯಲನ್ನು ಪ್ರೀತಿಸುತ್ತದೆ ಮತ್ತು ಭಾರತದಲ್ಲಿನ ಅನೇಕ ಜಾತಿಯ ಜಿಂಕೆ ಮತ್ತು ಹುಲ್ಲೆಗಳ ಮಧ್ಯೆ ಏಕಾಂಗಿಯಾಗಿ ಉರಿಯುವ ಸೂರ್ಯನ

ಬೆಳಕಿನಲ್ಲಿ ಮೇಯುತ್ತದೆ ಎಂದು ಗಮನಿಸಲಾಗಿದೆ. ಇದು ಪೂರ್ವದ ಕಡೆಗಿನ ಮಾನ್ಸೂನ್ ಅರಣ್ಯದ ಆರ್ದ್ರ ಭೂಪ್ರದೇಶಕ್ಕೆ ಸೇರಿದ *ಆನೂಪ*ಗಳಾದ ಆನೆಗಳಿಗೆ ವ್ಯತಿರಿಕ್ತವಾದ, ಒಣ ಹುಲ್ಲುಗಾವಲಿನ ಜೀವಿಯಾದ *ಜಾಂಗಲ*.

ವೈದಿಕ ಧರ್ಮದ ಪ್ರತಿಸ್ಪರ್ಧಿಗಳಾದ ಬೌದ್ಧ ಮತ್ತು ಜೈನ ಧರ್ಮಗಳು ಆ ವಿಸ್ತರಣೆಯ ಪೂರ್ವದ ಅಂಚಿನಲ್ಲಿ, ವೈದಿಕ ಪ್ರದೇಶದ ಪರಿಧಿಯಲ್ಲಿ ಆನೆ-ಸ್ನೇಹಿ ಪರಿಸರವನ್ನು ಹೊಂದಿರುವ ಹೊಸ ಭೂಮಿಯಲ್ಲಿ ಹುಟ್ಟಿಕೊಂಡವು. ತತ್ಪರಿಣಾಮವಾಗಿ ವೈದಿಕ ಗ್ರಂಥಗಳಲ್ಲಿ ಪೂರ್ವ ಮತ್ತು ಪೌರಸ್ತ್ಯರ (ಪ್ರಾಚ್ಯ) ದೃಷ್ಟಿಕೋನವು ಪ್ರತಿಕೂಲವಾಗಿದೆ. ಉದಾಹರಣೆಗೆ, *ಅಥರ್ವ ವೇದ*ದಲ್ಲಿ ಜ್ವರವನ್ನು ಹೋಗಲಾಡಿಸುವ ಮಂತ್ರವು ಅದನ್ನು ಮಗಧದತ್ತ ದೂಡುತ್ತಿತ್ತು. ಈ ದೃಷ್ಟಿಕೋನದಿಂದಾಗಿ, ವೇದ ಸಂಪ್ರದಾಯಕ್ಕೆ ಸೇರಿದ ಪಠ್ಯಗಳು ಮಗಧದ ಉದಯ, ಮತ್ತು ನಂದರ ವಂಶವೂ ಸೇರಿದಂತೆ ಅದನ್ನು ಆಳಿದ ರಾಜರನ್ನು ಕಾಮಾಲೆ ದೃಷ್ಟಿಯಿಂದ ನೋಡುತ್ತವೆ. ಈ ವಿಷಯವು ಪುರಾಣಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ.: ಬ್ರಾಹ್ಮಣಿಕ ಗ್ರಂಥಗಳಲ್ಲಿ ನಂದ ವಂಶದವರನ್ನು ಕೀಳು ವಂಶದಲ್ಲಿ ಹುಟ್ಟಿದವರು, ವೈದಿಕ ಯೋಧ ವರ್ಗದ (ಸರ್ವಕ್ಷತ್ರಾಂತಕ) ವಿಧ್ವಂಸಕರು, ಶೂದ್ರರು ಮತ್ತು ಅನೀತಿವಂತ (ಶೂದ್ರಪ್ರಾಯ ಅಧಾರ್ಮಿಕಃ) ರಾಜರೇ ಹೆಚ್ಚಾಗಿ ಇರುವಂತಹ ದುಷ್ಟ ಯುಗದಲ್ಲಿ ಹುಟ್ಟಿದ ಮೊದಲನೆಯವರು ಎಂದೆಲ್ಲಾ ಪ್ರತಿಕೂಲವಾದ ಪದಗಳಲ್ಲಿ ಆಪಾದಿಸಲಾಗಿದೆ. ಸ್ಪಷ್ಟವಾಗಿ, ಈ ಪ್ರದೇಶದ ರಾಜರನ್ನು ಹೊಸಬರು, ಬ್ರಾಹ್ಮಣರೊಂದಿಗೆ ಅಷ್ಟೇನೂ ಅನ್ಯೋನ್ಯತೆ ಹೊಂದಿರದ, ಹಾಗೂ ಹೊಸ ಧರ್ಮಗಳಿಗೆ ಬಹಳವಾಗಿ ಸ್ಪಂದಿಸುವ "ಹೊಸ ಪುರುಷರು" ಎಂದು ಪರಿಗಣಿಸಲಾಗಿದೆ. ಅದೇನೇ ಇದ್ದರೂ, ಪುರಾಣಗಳಲ್ಲಿ ನಂದರನ್ನು ಎಲ್ಲವನ್ನೂ ತಮ್ಮ ಆಡಳಿತದ ವ್ಯಾಪ್ತಿಗೆ ತಂದ ರಾಜರು, ಏಕಮಾತ್ರ ಆಡಳಿತಗಾರರು (ಏಕರಾತ್) ಎಂದು ಕರೆಯಲಾಗುತ್ತಿತ್ತು. ಇದು ಅಕ್ಷರಶಃ ಅರ್ಥದಲ್ಲಿ ನಿಜವಲ್ಲ ಎಂದು ನಮಗೆ ತಿಳಿದಿದೆ: ಭಾರತದಲ್ಲಿ ನಂದರಿಂದ ಸ್ವತಂತ್ರವಾದ ಇತರ ರಾಜ್ಯಗಳು ಮತ್ತು ಗಣರಾಜ್ಯಗಳು ಇದ್ದವು, ಆದರೆ ಇದು ಅವರು ಒಂದು ಸಾಮ್ರಾಜ್ಯದ ಆಡಳಿತಗಾರರಾಗಿದ್ದರು ಎಂಬುದನ್ನು ಮಾತ್ರ ಸೂಚಿಸುತ್ತದೆ. ಅವರ ರಾಜಧಾನಿ ಪಾಟಲಿಪುತ್ರವಾಗಿತ್ತು, ಮತ್ತು ಇತರ ಮೂಲಗಳು ಅವರ ಅಪ್ರತಿಮ ಸಂಪತ್ತಿನ ಬಗ್ಗೆ ಒತ್ತಿಹೇಳುತ್ತವೆ. ಅವರು ಈ ಸಂಪತ್ತನ್ನು ತೊಗಲುಗಳು, ರಾಳಗಳು, ಮರಗಳು, ಕಲ್ಲುಗಳು, ಅಂಗಡಿಗಳು ಮತ್ತು ಉದ್ಯೋಗಗಳು – ಎಲ್ಲದರ ಮೇಲೆ ತೆರಿಗೆಯನ್ನು ಹೇರುವ ಮೂಲಕ ಸ್ವಾಧೀನಪಡಿಸಿಕೊಂಡಿದ್ದರು. ನಂದರು ತೆರಿಗೆಯ ಮಟ್ಟದಲ್ಲಿ ವಿಪುಲ ಹೆಚ್ಚಳಿಕೆಯನ್ನು ತಂದರು.

ನಂದರು ಮತ್ತು ಅವರ ಆಳ್ವಿಕೆಯ ಬಗ್ಗೆ ನಮಲ್ಲಿ ವಿಶ್ವಾಸಾರ್ಹ ಮಾಹಿತಿಯು ಲಭ್ಯವಿಲ್ಲ. ಆದರೆ, ಅವರ ಆಳ್ವಿಕೆಯಲ್ಲೇ ಮೆಸಿಡೋನ್ನ ಅಲೆಕ್ಸಾಂಡರ್ ಇರಾನ್‌ನ ಮೂಲಕ ತನ್ನ ಸೈನ್ಯವನ್ನು ಭಾರತಕ್ಕೆ ತಂದಿರಬಹುದಾದ ಸಾಧ್ಯತೆ ಇದೆ. ಆದ್ದರಿಂದ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಬರೆಯುವ ಅಲೆಕ್ಸಾಂಡರ್ ಇತಿಹಾಸಕಾರರು, ಅಂದಿನ ಭಾರತದ ಸೈನ್ಯದ ಸ್ಥಿತಿಯ ಬಗ್ಗೆ ಕೆಲವು ಮಾಹಿತಿಯನ್ನು ದಾಖಲಿಸಿದ್ದಾರೆ. ಇದು ನಮ್ಮ ಅನ್ವೇಷಣೆಗೆ ಅಮೂಲ್ಯವಾಗಿದೆ. ಈ ಮೂಲಗಳಲ್ಲಿ ಸಮಸ್ಯೆಗಳಿವೆ. ಖಚಿತವಾಗಿ ಒಂದು ಪ್ರಮುಖ ವಿಷಯವನ್ನು ಹೇಳುವುದಾದರೆ, ನಂದರ ಅವಧಿಯ ಯಾವುದೇ ಗ್ರೀಕ್ ಇತಿಹಾಸಗಳು ಸಮಕಾಲೀನ ವಿವರಣೆಗಳಲ್ಲ, ಇವೆಲ್ಲವನ್ನೂ ಉಲ್ಲೇಖಿತ ಘಟನೆಗಳು ನಡೆದ ಮೂರರಿಂದ ಐದು ಶತಮಾನಗಳ ನಂತರ ಬರೆಯಲಾಗಿದೆ. ಆದರೆ ಅವೆಲ್ಲವೂ ಅಲೆಕ್ಸಾಂಡರ್‌ನನ ಸೇನೆಯ ಸಹಭಾಗಿಗಳ ಹಿಂದಿನ ಸಮಕಾಲೀನ ವಿವರಗಳ ಮೇಲೆ ನಿರ್ಭರವಾಗಿವೆ. ಅಲೆಕ್ಸಾಂಡರನ ನಂತರದ ಇತಿಹಾಸಗಳ ಯಶಸ್ಸಿನ ಕಾರಣದಿಂದಾಗಿ ಇವರ ಆತ್ಮಚರಿತ್ರೆಗಳು ಕಳೆದುಹೋಗಿದ್ದು, ಈ ನಂತರದ ಕೃತಿಗಳಲ್ಲಿ ಮಾತ್ರ ತುಣುಕುಗಳಾಗಿ ಸಂರಕ್ಷಿಸಲ್ಪಟ್ಟಿವೆ. ಅಲೆಕ್ಸಾಂಡರ್‌ನ ಸಮಕಾಲೀನ ವಿವರಗಳನ್ನು, ಒಂದು ಮಟ್ಟಿಗೆ, ಈ ತುಣುಕುಗಳಿಂದ ಪುನಃ ರಚಿಸಲು ಸಾಧ್ಯವಿದೆ. ಅವುಗಳನ್ನು ಬಳಸಿದ ಮತ್ತು ಬಳಸುವುದರ ಮೂಲಕ ಅವುಗಳನ್ನು ಮರೆಮಾಡಿದ ಇದೇ ಅಲೆಕ್ಸಾಂಡರ್ ಇತಿಹಾಸಕಾರರ ವಿವರಗಳಲ್ಲಿ ಅಲೆಕ್ಸಾಂಡರ್‌ನ ಸಮಕಾಲೀನ ವಿವರಗಳನ್ನು ಉಲ್ಲೇಖಿಸಲಾಗಿದೆ ಅಥವಾ ಸಂಕ್ಷಿಪ್ತಗೊಳಿಸಲಾಗಿದೆ.

ಅಲೆಕ್ಸಾಂಡರ್‌ನು ಭಾರತದಲ್ಲಿ ಸ್ವಲ್ಪ ಅವಧಿಯವರೆಗೆ, ಅಂದರೆ, ಕ್ರಿಸ್ತಪೂರ್ವ 327-4 ರವರೆಗು ಇದ್ದನು, ಮತ್ತು ಅವನ ಸೈನ್ಯವು ಸಿಂಧೂ ಕಣಿವೆಯಲ್ಲಿರುವ ಬಿಯಾಸ್ ನದಿಯಷ್ಟು ದೂರ ಪೂರ್ವಕ್ಕೆ ಮುನ್ನಡೆದಿತ್ತು. ಅವನು ಗಂಗಾ ಕಣಿವೆ ಅಥವಾ ನಂದರನ್ನು ತಲುಪಲಿಲ್ಲ. ಅವನ ಇಚ್ಛೆಯೇ ಹಾಗಿತ್ತು. ಏಕೆಂದರೆ, ಅವನು ನಂಬಿದಂತೆ ಗಂಗಾ ನದಿಯು ಜಗತ್ತನ್ನು ಸುತ್ತುವರೆದಿರುವ ಸಾಗರಕ್ಕೆ ಸೇರುತ್ತಿದೆಯೇ ಎಂದು ಕಂಡುಹಿಡಿಯುವುದು ಅವನ ಗುರಿಯಾಗಿತ್ತು ಮತ್ತು ಪರಂಪರೆಯ ಪ್ರಕಾರ, ಹರ್ಕ್ಯುಲಸ್ ಮತ್ತು ಡಯೋನೈಸಸ್ ಪೂರ್ವ ದಿಕ್ಕುಗಳನ್ನು ಆಕ್ರಮಿಸಿಕೊಳ್ಳುವಲ್ಲಿ ಕ್ರಮಿಸಿರುವ ದೂರದ ಮಿತಿಗಳನ್ನು ಮೀರಲು ಅವನು ಬಯಸಿದ್ದನು. ಆದರೆ ಅವನ ಸೇನೆಯು, ಬೀಸ್ ನದಿಯ ಮೂಲಕ ಪಂಜಾಬಿನ ಪೂರ್ವದ ಅಂಚನ್ನು ತಲುಪಿದ ನಂತರ, ಹೆಚ್ಚಿನ ದೂರಕ್ಕೆ ಹೋಗಲು ನಿರಾಕರಿಸಿತು. ಆದ್ದರಿಂದ ಅವನು ಗಂಗೆಯ ಕಡೆಗೆ ಮುನ್ನಡೆಯುವುದನ್ನು ಕೈಬಿಟ್ಟು, ಸಿಂಧೂ ನದಿಯ ಕಡೆಗೆ ತನ್ನ ಸೇನೆಯನ್ನು ಮುನ್ನಡೆಸಿಕೊಂಡು, ಅಂತಿಮವಾಗಿ ಬ್ಯಾಬಿಲೋನ್‌ಗೆ ಮರಳಿದನು.

ನಿಸ್ಸಂಶಯವಾಗಿ ಅಲೆಕ್ಸಾಂಡರ್ ಭಾರತದ ವಾಯುವ್ಯ ಪ್ರದೇಶದ ತನ್ನ ಭಾರತೀಯ ಮಿತ್ರರ ಮೂಲಕ ನಂದ ಸಾಮ್ರಾಜ್ಯದ ಬಗ್ಗೆ ಮಾಹಿತಿಯನ್ನು ಪಡೆದುಕೊಂಡನು. ಈ ಮಾಹಿತಿಯನ್ನು ಅವನ ಇತಿಹಾಸಕಾರರು ದಾಖಲಿಸಿದ್ದಾರೆ. ನಂದರನ್ನು ಅವರ ರಾಜವಂಶದ ಹೆಸರಿನಿಂದ ಸೂಚಿಸದೆ ಜನರ ಪ್ರಾದೇಶಿಕ ಪದನಾಮಗಳಿಂದ ಸೂಚಿಲಾಗಿದೆ - ಗಂಗಾರ್ರೈಡ್ಸ್ ಮತ್ತು ಪ್ರಸಿಯೋಯಿ, ಅಂದರೆ, ಗಂಗಾ ಪ್ರದೇಶದ ಮತ್ತು ಪೂರ್ವದ ಜನರು (ಸಂಸ್ಕೃತದಲ್ಲಿ, ಪ್ರಾಚ್ಯ). ಇದು ಪಂಜಾಬ್‌ನ ದೃಷ್ಟಿಕೋನಕ್ಕೆ ಅನುಗುಣವಾಗಿದೆ. ನಮ್ಮ ಆಸಕ್ತಿಯ ವಿಷಯವೆಂದರೆ ಅದು ಸೇನೆಯ ವಿಶೇಷತೆಗಳು: ಅವರು 20,000 ಕುದುರೆಗಳು, 200,000 ಕಾಲಾಳುಗಳು, 2,000 ರಥಗಳು ಮತ್ತು3,000 ಅಥವಾ 4,000 ಆನೆಗಳುಳ್ಳ ಸೈನ್ಯವನ್ನು ಹೊಂದಿದ್ದರು.

ಪ್ರಾಚೀನ ಮೂಲಗಳಲ್ಲಿ ಈ ಸಂಖ್ಯೆಗಳ ವ್ಯತ್ಯಾಸವನ್ನು ಪರಿಗಣಿಸುವುದು ಈ ಹಂತದಲ್ಲಿ ಉಪಯುಕ್ತವಾಗಿದೆ:

	ಡಯೋಡೋರಸ್	ಕರ್ಟಿಯಸ್	ಪ್ಲುಟಾರ್ಕ್	ಪ್ಲಿನಿ
ಕುದುರೆ	20,000	20,000	80,000	30,000
ಕಾಲಾಳು	200,000	200,000	200,000	600,000
ರಥಗಳು	2,000	2,000	8,000	-
ಆನೆಗಳು	3,000	4,000	6,000	9,000

ಈ ಸಂಖ್ಯೆಗಳು ಸಾಮಾನ್ಯ ಮೂಲದಿಂದ ಬಂದಿರುವ ಸಾಧ್ಯತೆಯಿದೆ. ಅಲೆಕ್ಸಾಂಡರ್ನ ವಿದ್ವಾಂಸರು ಸಾಮಾನ್ಯವಾಗಿ ಆ ಮೂಲವು ಕ್ಲೀಟಾರ್ಕಸ್ ಆಫ್ ಅಲೆಕ್ಸಾಂಡ್ರಿಯಾ ಎಂದು ಗುರುತಿಸುತ್ತಾರೆ. ಅವರು ಅಲೆಕ್ಸಾಂಡರ್ನ ಜನಪ್ರಿಯ ಇತಿಹಾಸವನ್ನು ಬರೆದವರಾಗಿದ್ದಾರೆ. ಅದು ಈಗ ಕಳೆದುಹೋಗಿದೆ. ಆದರೆ ನಂತರದಲ್ಲಿ ಬಂದ ಅಲೆಕ್ಸಾಂಡರ್‌ನ ನಾಲ್ಕು ಇತಿಹಾಸಗಳು - ಡಿಯೋಡೋರಸ್, ಕರ್ಟಿಯಸ್, ಜಸ್ಟಿನ್ ಮತ್ತು ಪ್ಲುಟಾರ್ಕ್ ಬರೆದಂತಹವುಗಳನ್ನು ಹೆಚ್ಚಾಗಿ ಅವಲಂಬಿಸಿವೆ; ಮತ್ತು ಇತರರಿಗಿಂತ ಹೆಚ್ಚು ವ್ಯತ್ಯಾಸವನ್ನು ತೋರಿಸುವ ಪ್ಲಿನಿಯೂ ಸಹ, ಈ ವಿಷಯದಲ್ಲಿ ಅದೇ ಮೂಲವನ್ನು ಅವಲಂಬಿಸಿದ್ದಾರೆ. ಈ ಲೇಖಕರನ್ನು ಸಾಮಾನ್ಯವಾಗಿ ವಲ್ಗೇಟ್ ಸಂಪ್ರದಾಯ ಎಂದು ಕರೆಯಲಾಗುತ್ತದೆ. ಅಂದರೆ, ಕ್ಲಿಟಾರ್ಕಸ್ ಮೂಲಕ ಹುಟ್ಟಿಕೊಳ್ಳುವ ಅಲೆಕ್ಸಾಂಡರ್ ಕಥೆಯ ಜನಪ್ರಿಯ ಆವೃತ್ತಿ; ಈ ವಲ್ಗೇಟ್ ಸಂಪ್ರದಾಯವು ಸ್ವತಃ ಪ್ರತ್ಯಕ್ಷದರ್ಶಿಯಾಗಿದ್ದ ಟಾಲೆಮಿಯ ಮತ್ತು ಇತರರ ನಿರೂಪಣೆಯ ಆಧಾರದ ಮೇಲೆ ಅರ್ರಿಯನ್, ಮತ್ತು ಇತರರು ಬರೆದ ಅಲೆಕ್ಸಾಂಡರ್‌ನ ಉತ್ತಮ ಇತಿಹಾಸದೊಂದಿಗೆ ವ್ಯತಿರಿಕ್ತವಾಗಿದೆ. (ಅರ್ರಿಯನ್ ನಂದಾ ಸೈನ್ಯದ ಅಂಕಿಅಂಶಗಳನ್ನು ನೀಡುವುದಿಲ್ಲ.) ಒಟ್ಟಾರೆಯಾಗಿ, ಉಳಿದಿರುವ ಅಲೆಕ್ಸಾಂಡರ್

ಇತಿಹಾಸಗಳನ್ನು ಗುರುತಿಸಬಹುದಾದ ವಿಭಿನ್ನ ಮೂಲಗಳ (ಕನಿಷ್ಠಪಕ್ಷ ಭಾಗಶಃ) ಆಧಾರದ ಮೇಲೆ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಮೇಲಿನ ಕೋಷ್ಟಕದಲ್ಲಿ ಕುಟುಂಬದ ಅಂಕಿಅಂಶಗಳಲ್ಲಿನ ಸಮಾನತೆಗೆ ಸಾಮಾನ್ಯ ಮೂಲದ ಗ್ರಹೀತವು ಕಾರಣವಾಗಿದೆ. ಆದರೆ, ವಾಸ್ತವದಲ್ಲಿ ಅವುಗಳ ನಡುವಿನ ದೊಡ್ಡ ವ್ಯತ್ಯಾಸಗಳೇ ಕೋಷ್ಟಕವು ನೀಡುವ ನಿಜವಾದ ಪಾಠವಾಗಿದೆ ಮತ್ತು ಅದರ ಪರಿಣಾಮವಾಗಿ ಅಂತಹ ಅಂಕಿಅಂಶಗಳನ್ನು ಒಪ್ಪಿಕೊಳ್ಳುವಲ್ಲಿ ಎಚ್ಚರಿಕೆಯ ಅಗತ್ಯವಿದೆ.

ಬಿಯಾಸ್‌ನ ಉದ್ದಕ್ಕೂ ಬಿಡಾರ ಹೂಡಿದ್ದ ಅಲೆಕ್ಸಾಂಡರ್‌ನ ಸೈನಿಕರು ಭಾರತದತ್ತ ಮತ್ತಷ್ಟು ಮುನ್ನಡೆಯಲು ನಿರಾಕರಿಸಲು ಕಾರಣವಾಗಿ ಈ ಅಂಕಿಅಂಶಗಳನ್ನು ನಿರೂಪಿಸಲಾಗಿದೆ. ಸಂದರ್ಭವು ಹೀಗಿರುವಾಗ, ಸೈನಿಕರನ್ನು ಹೇಡಿತನದ ಆರೋಪದಿಂದ ಪಾರುಮಾಡುವಂತೆ ಎದುರಾಳಿ ನಂದಾ ಪಡೆಗಳನ್ನು ಉತ್ಪ್ರೇಕ್ಷಿಸುವ ಉದ್ದೇಶವನ್ನು ಬರಹಗಾರರು ಹೊಂದಿರುತ್ತಾರೆ. ಇದು ಊಹಾಪೋಹವಾಗಿದ್ದರೂ, ಇದು ನಮ್ಮನ್ನು ಎಚ್ಚರಿಕೆಯಿಂದ ಇರುವಂತೆ ಮಾಡುವ ಉಪಯುಕ್ತ ಉದ್ದೇಶವನ್ನು ಹೊಂದಿದೆ; ಆದರೆ ಇದು ಸತ್ಯವಲ್ಲ, ಹಾಗೂ ಒಂದು ಉದ್ದೇಶವು ಇತ್ತು ಎಂದ ಮಾತ್ರಕ್ಕೆ ಅದನ್ನು ಕಾರ್ಯಗತಗೊಳಿಸಲಾಗಿದೆ ಎಂಬುದಕ್ಕೆ ಅದು ಪುರಾವೆಯಾಗುವುದಿಲ್ಲ. ಏನೇ ಆಗಲಿ, ಅಲೆಕ್ಸಾಂಡರ್ ನಿಶ್ಚಯವಾಗಿ ಭಾರತೀಯ ಮಿತ್ರರಾಷ್ಟ್ರಗಳಿಂದ ಗಂಗಾನದಿಯ ದೇಶಗಳ ಬಗ್ಗೆ ತಾನು ಪಡೆಯಬಹುದಾದ ಅತ್ಯುತ್ತಮ ಮಾಹಿತಿಯನ್ನು ಹುಡುಕುತ್ತಿದ್ದನು.

ಅಲೆಕ್ಸಾಂಡರ್ ಇತಿಹಾಸಕಾರರು ಪೋರಸ್ ಎಂದು ಕರೆಯುವ ಭಾರತೀಯ ರಾಜನ ಯುದ್ಧಭೂಮಿ ಸೈನ್ಯವು ಚಿಕ್ಕದಾಗಿದ್ದರೂ, ಇದು *ಚತುರಂಗ* ಯೋಜನೆಯ ಪ್ರಕಾರ ಗಣನೀಯವಾದ ಸೈನ್ಯವಾಗಿತ್ತು. ನೀಡಲಾದ ಸಂಖ್ಯೆಗಳು ಹೀಗಿವೆ: 30,000 ಕಾಲಾಳುಗಳು, 4,000 ಕುದುರೆಗಳು, 300 ರಥಗಳು ಮತ್ತು 200 ಆನೆಗಳು. ಭಾರತದ ಸಿಂಧೂ ಕಣಿವೆಯ ಜೇಲಂ ನದಿಯ ದಡದಲ್ಲಿ (ಗ್ರೀಕ್ ಮೂಲಗಳಲ್ಲಿ ಹೈಡಾಸ್ಪೆಸ್ ಎಂದು ಕರೆಯಲ್ಪಡುವ) ಅಲೆಕ್ಸಾಂಡರ್ ನ ಪೋರಸ್ ವಿರುದ್ಧದ ಗೆಲುವನ್ನು ಒಂದು ಮಹಾವಿಜಯವೆಂದು ಪರಿಗಣಿಸಲಾಗಿ, ಅಲೆಕ್ಸಾಂಡರ್ನ ಇತಿಹಾಸಕಾರರು ಈ ಘಟನೆಯನ್ನು ವಿಸ್ತಾರವಾಗಿ ವಿವರಿಸಿದ್ದಾರೆ; ನಂತರ, ಅಲೆಕ್ಸಾಂಡರ್ ತನ್ನ ಸ್ವಂತ ಪ್ರದೇಶದ ಆಳ್ವಿಕೆಯಲ್ಲಿ ಪೋರಸ್ನನ್ನು ಖಾಯಂ ಆಗಿ ಸ್ವೀಕರಿಸಿ, ಭಾರತದಲ್ಲಿ ತಾನು ವಶಪಡಿಸಿಕೊಂಡ ಎಲ್ಲಾ ಪ್ರದೇಶಗಳ ಉಸ್ತುವಾರಿಯನ್ನು ಅವನಿಗೆ ವಹಿಸಿದನು.

ನಮ್ಮ ಅಧ್ಯಯನಕ್ಕೆ ವಿಶೇಷವಾಗಿ ಮೌಲ್ಯಯುತವಾದ ಅಂಶವೆಂದರೆ, ಅಲೆಕ್ಸಾಂಡರ್ ಇತಿಹಾಸಕಾರರು ಭಾರತೀಯ ರಾಜ್ಯಗಳನ್ನು ಗಣರಾಜ್ಯಗಳಿಂದ ನಿರ್ದಿಷ್ಟವಾಗಿ ವಿಭಜಿಸಿ,

ಇವುಗಳನ್ನು ಸ್ವತಂತ್ರ ಭಾರತೀಯ ಬುಡಕಟ್ಟುಗಳು, ಅಥವಾ ಸ್ವ-ಅಧೀನ ನಗರಗಳು, ಅಥವಾ ಸಾಮಂತರು ಅಥವಾ ಪ್ರಜಾಪ್ರಭುತ್ವಗಳು ಎಂದು ಹೆಸರಿಸುತ್ತಾರೆ. ಯುದ್ಧದ ಆನೆಗಳನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ನಿರ್ವಹಿಸುವ ಸಾಮರ್ಥ್ಯದಲ್ಲಿ ಗಣರಾಜ್ಯಗಳೊಂದಿಗೆ ಸಾಮ್ರಾಜ್ಯಗಳನ್ನು ಹೋಲಿಸಲು ಇದು ನಮಗೆ ಅನುಮತಿಸುತ್ತದೆ.

ಪೋರಸ್ ವಿರುದ್ಧದ ವಿಜಯ, ಪೂರ್ವದತ್ತ ಮುಂದುವರಿಯಲು ಸೈನ್ಯದ ನಿರಾಕರಣೆ ಮತ್ತು ಸಿಂಧೂ ಕಣಿವೆಯಲ್ಲಿ ದಕ್ಷಿಣದತ್ತ ತಿರುಗುವಿಕೆಯನ್ನು ಗಮನಿಸಿ ಅಲೆಕ್ಸಾಂಡರ್ ಇತಿಹಾಸಕಾರರು ಈ ಹಲವು ಗಣರಾಜ್ಯಗಳನ್ನು ಉಲ್ಲೇಖಿಸುತ್ತಾರೆ ಮತ್ತು ಅವುಗಳ ಸೈನ್ಯಬಲಕ್ಕೆ ಅಂಕಿಅಂಶಗಳನ್ನು ನೀಡುತ್ತಾರೆ. ಪ್ರತಿಯೊಂದು ಸಂದರ್ಭದಲ್ಲೂ ಆನೆ ದಳದ ಉಲ್ಲೇಖವಿಲ್ಲ. ಕೆಲವೊಮ್ಮೆ ಒಂದು ಸಣ್ಣ ಸಂಖ್ಯೆಯ ಉಲ್ಲೇಖವಿರಬಹುದು. ಮಲ್ಲೋಯ್ ಮತ್ತು ಆಕ್ಸಿಡ್ರಾಕೈ ನೆರೆಯ ಗಣರಾಜ್ಯಗಳಾಗಿದ್ದು, ಅಲೆಕ್ಸಾಂಡರ್‌ನನ್ನು ವಿರೋಧಿಸಲು ಸಂಯೋಜಿಸಲ್ಪಟ್ಟವು; ಸೇನಾಬಲದ ಸಂಖ್ಯೆಗಳು ಕೇವಲ ಕಾಲಾಳು, ಕುದುರೆ, ಮತ್ತು ರಥಗಳನ್ನು ಪಟ್ಟಿ ಮಾಡುತ್ತವೆಯೇ ಹೊರತು ಆನೆಯನ್ನಲ್ಲ. ಮಲ್ಲೋಯಿ ಶಾಂತಿಗಾಗಿ ಬೇಡಿದಾಗ, ಅವರ ರಾಯಭಾರಿಗಳು ಇತರೆ ವಸ್ತುಗಳ ಜೊತೆಗೆ ಕುದುರೆಗಳು ಮತ್ತು ಸಾರಥಿಗಳನ್ನೊಳಗೊಂಡ ರಥಗಳ ಉಡುಗೊರೆಗಳನ್ನು ತಂದರು, ಆನೆಗಳನ್ನಲ್ಲ. ಪ್ರಜಾಪ್ರಭುತ್ವವನ್ನು ಹೊಂದಿದ್ದ ಸಬರಾಸಿ ಅಥವಾ ಸಾಂಬುಸ್ತೈ 60,000 ಕಾಲಾಳುಗಳು, 6,000 ಕುದುರೆಗಳು ಮತ್ತು 500 ರಥಗಳ ಪಡೆಯನ್ನು ಹೊಂದಿತ್ತಾದರೂ, ಆನೆಯ ದಳದ ಬಗ್ಗೆ ಯಾವುದೇ ಉಲ್ಲೇಖವಿರಲಿಲ್ಲ. ಸಿಂಧೂ ಕಣಿವೆಯ ದಕ್ಷಿಣ ಪ್ರದೇಶದಲ್ಲಿ ಆನೆಗಳು ಸುಲಭವಾಗಿ ಲಭ್ಯವಿದ್ದಂತೆ ಉತ್ತರದಲ್ಲಿ ಲಭ್ಯವಿರದ ಸಾಧ್ಯತೆ ಇದೆ. ಆದರೆ ಅಲೆಕ್ಸಾಂಡರ್ ಹಲವಾರು ಆನೆಗಳನ್ನು ಉಡುಗೊರೆಯಾಗಿ ಪಡೆದಿದ್ದು, ಬಹುತೇಕ ಎಲ್ಲವೂ ಅವನೊಂದಿಗೆ ಮೈತ್ರಿ ಮಾಡಿಕೊಂಡ ರಾಜರಿಂದಲೇ ಪಡೆಯಲಾಗಿದೆ. ಹಾಗಾಗಿ, ಅಲೆಕ್ಸಾಂಡರ್ ಇತಿಹಾಸಕಾರರು, ಆನೆಗಳು ಭಾರತೀಯ ರಾಜತ್ವದೊಂದಿಗೆ ಬಹಳ ಪ್ರಮುಖವಾಗಿ ಸಂಬಂಧ ಹೊಂದಿದ್ದು, ಗಣರಾಜ್ಯಗಳಲ್ಲಿ ಅಪರೂಪವಾಗಿವೆ ಅಥವಾ ಅಸ್ತಿತ್ವದಲ್ಲಿ ಇಲ್ಲ ಎಂದು ತೋರಿಸುತ್ತಾರೆ.

ಯುದ್ಧದ ಆನೆಗಳು ಗಣರಾಜ್ಯದೊಂದಿಗೆ ಸಂಬಂಧಿಸಿದ ಅಪರೂಪವಾದ ಒಂದು ಘಟನೆಯು ಅಸ್ಸಾಕೆನೊಯ್‌ಗೆ ಸಂಬಂಧಿಸಿದೆ; ಸಿಂಧೂ ನದಿಯನ್ನು ದಾಟಿ ಸರಿಯಾಗಿ ಭಾರತಕ್ಕೆ ತಲುಪುವ ಮೊದಲು ಅಲೆಕ್ಸಾಂಡರ್ ಇವನನ್ನು ಎದುರಿಸಿದ. ಅವರ ಪಡೆಯಲ್ಲಿ 30,000 ಕಾಲಾಳುಗಳು, 20,000 ಕುದುರೆಗಳು ಮತ್ತು 30 ಆನೆಗಳು ಇದ್ದವೆಂದು ವರದಿಯಾಗಿದೆ. ಅಲೆಕ್ಸಾಂಡರ್ ಮುನ್ನುಗ್ಗಿದಾಗ ಅವರು ಓಡಿಹೋದರು ಮತ್ತು ತಮ್ಮ ಆನೆಗಳನ್ನು ಬಿಡುಗಡೆ

ಮಾಡಿದರು. ಆಗ ಅವನು ಭಾರತೀಯ ಆನೆಗಳ ಬೇಟೆಗಾರರನ್ನು ಎದುರುಗೊಂಡಾಗ, ಅವರು ಆ ಆನೆಗಳನ್ನು ಮತ್ತೆ ವಶಪಡಿಸಿಕೊಂಡರು. ಭಾರತೀಯ ಗಣರಾಜ್ಯಗಳು ಆನೆಗಳ ಯುದ್ಧವನ್ನು ತಿರಸ್ಕರಿಸಲಿಲ್ಲವಾದರೂ ಸಾಮ್ರಾಜ್ಯಗಳಿಗೆ ಹೋಲಿಸಿದರೆ ಅವರಿಂದ ಹೆಚ್ಚಿನ ಸಂಖ್ಯೆಯ ಪ್ರಾಣಿಗಳನ್ನು ಸಂಗ್ರಹಿಸಲು ಸಾಧ್ಯವಾಗಲಿಲ್ಲ. ಯುದ್ಧದ ಆನೆಯು ಭಾರತೀಯ ರಾಜತ್ವದ ಆವಿಷ್ಕಾರವಾಗಿದೆ ಎಂಬ ಊಹೆಯೊಂದಿಗೆ ಇದು ಒಪ್ಪುತ್ತದೆ.

ಇದಕ್ಕೆ ವ್ಯತಿರಿಕ್ತವಾಗಿ, ಅಲೆಕ್ಸಾಂಡರ್ ಆನೆಗಳನ್ನು ರಾಜರಿಂದ ಉಡುಗೊರೆಯಾಗಿ, ಸ್ನೇಹದ ಕೊಡುಗೆಯಾಗಿ ಅಥವಾ ಶರಣಾಗತಿಯ ಸಂಕೇತವಾಗಿ ಮತ್ತು ಯುದ್ಧದ ಸುಲಿಗೆಯ ನಿಟ್ಟಿನಲ್ಲಿ ಪಡೆದುಕೊಂಡನು. ಪಂಜಾಬ್‌ನ ತಕ್ಸಿಲಾ ರಾಜನು (ಸಂಸ್ಕೃತದಲ್ಲಿ, ತಕ್ಸಶಿಲಾ) ಅವನ ಮಿತ್ರತ್ವೆಯನ್ನು ಬಯಸಿ 25 ಆನೆಗಳನ್ನು ಕಳುಹಿಸಿದನು; ಸ್ವಲ್ಪ ಸಮಯದ ನಂತರ, ಅಲೆಕ್ಸಾಂಡರ್ ಸಿಂಧೂವನ್ನು ದಾಟಿ ತಕ್ಷಶಿಲಾವನ್ನು ತಲುಪಿದಾಗ, ರಾಜನು ಅವನಿಗೆ 200 ತಲಾಂತು ಬೆಳ್ಳಿ, 3,000 ಕೊಬ್ಬಿದ ಎತ್ತುಗಳು, 10,000 ಕುರಿಗಳು, 30 ಆನೆಗಳು ಮತ್ತು ಸೈನ್ಯಕ್ಕೆ ಔತಣವನ್ನು ನೀಡಿದನು. ಅಲೆಕ್ಸಾಂಡರ್ನ ಯಶಸ್ಸನ್ನು ನೋಡಿದ ರಾಜ ಅಬಿಸಾರೆಸ್, ಹಣ ಮತ್ತು 40 ಆನೆಗಳ ಉಡುಗೊರೆಯೊಂದಿಗೆ ಅವನ ಶರಣಾಗತಿಯನ್ನು ಸೂಚಿಸಿದನು, ಆದರೆ ವೈಯಕ್ತಿಕವಾಗಿ ಕಾಣಿಸಿಕೊಳ್ಳದಂತೆ ಎಚ್ಚರಿಕೆ ವಹಿಸಿದನು. ಸ್ವಲ್ಪ ಸಮಯದ ನಂತರ, ಅವನು ಮತ್ತೆ ಸುಮಾರು 30 ಆನೆಗಳನ್ನು ಕಳುಹಿಸಿದನು, ಆದರೆ ಮತ್ತೆ ವೈಯಕ್ತಿಕವಾಗಿ ಕಾಣಿಸಿಕೊಳ್ಳದಿರಲು ಕಾರಣಗಳನ್ನು ನೀಡಿದನು. ಅಲೆಕ್ಸಾಂಡರ್ ಸೈನ್ಯವನ್ನು ದಕ್ಷಿಣಕ್ಕೆ ತಿರುಗಿಸಿ ಸಿಂಧೂ ನದಿಯತ್ತ ಸಾಗಿದ ನಂತರ, ರಾಜ ಮೌಸಿಕಾನೋಸ್ "ಆಯ್ಕೆಯ ಉಡುಗೊರೆಗಳು ಮತ್ತು ತನ್ನ ಎಲ್ಲಾ ಆನೆಗಳೊಂದಿಗೆ" ಶರಣಾದನು ಮತ್ತು ಆಕ್ಸಿಕೇನೋಸ್ ರಾಜನ ಎರಡು ನಗರಗಳಿಗೆ ಲಗ್ಗೆಯಿಟ್ಟ ಫಲವಾಗಿ ಇನ್ನಷ್ಟು ಆನೆಗಳು ಬಂದವು. ಇದು ಯುದ್ಧದ ಆನೆಗಳನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ನಿರ್ವಹಿಸುವ ಸಾಮ್ರಾಜ್ಯಗಳ ಉನ್ನತ ಸಾಮರ್ಥ್ಯವನ್ನು ದೃಢೀಕರಿಸುತ್ತದೆ.

ಆದಾಗ್ಯೂ, ಸ್ಟ್ರಾಬೋನ ಗ್ರೀಕ್ ಮೂಲಗಳ ಒಂದು ಭಾಗವು ನೇರವಾಗಿ ಈ ಸಾಕ್ಷ್ಯವನ್ನು ವಿರೋಧಿಸುತ್ತದೆ. ಅಲೆಕ್ಸಾಂಡರ್‌ನ ಸೈನ್ಯವು ಮುನ್ನಡೆಯಲು ನಿರಾಕರಿಸಿದ ಬಿಯಾಸ್ ನದಿಯ ಪೂರ್ವಕ್ಕೆ ಏನಿತ್ತು ಎಂಬ ವಿಷಯದಲ್ಲಿ ಎರಡು ಪರಂಪರೆಗಳಿವೆ. ಇವುಗಳಲ್ಲಿ ಒಂದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ: ಗಂಗಾ ನಿವಾಸಿಗಳು ಮತ್ತು ಪೌರಸ್ತ್ಯರ ವರ್ಗದ ನಂದರ ದೊಡ್ಡ ಸೇನಾಸಮೂಹ. ಇನ್ನೊಂದು ಪರಂಪರೆಯು ಅರ್ರಿಯನ್‌ನಲ್ಲಿ ಕಂಡುಬರುತ್ತದೆ, ಇದು ಗಣರಾಜ್ಯ ಮತ್ತು ಅದರ ಆನೆ ದಳದ ಬಗ್ಗೆ ತಿಳಿಸುತ್ತದೆ: “ಹೈಫಾಸಿಸ್‌ನ [ಅಂದರೆ. ಬಿಯಾಸ್ ನದಿ] ಇನ್ನೊಂದು ಬದಿಯಲ್ಲಿ, ಅಲೆಕ್ಸಾಂಡರ್‌ಗೆ ವರದಿ ನೀಡಿದ್ದ

ಅನುಸಾರ, ದೇಶವು ಫಲವತ್ತಾಗಿತ್ತು, ಅಲ್ಲಿನ ಪುರುಷರು ಉತ್ತಮ ರೈತರು ಮತ್ತು ಧೀರ ಯೋಧರಾಗಿದ್ದು, ತಮ್ಮ ವ್ಯವಹಾರಗಳನ್ನು ಕ್ರಮಬದ್ಧವಾಗಿ ನಿರ್ವಹಿಸುತ್ತಿದ್ದರು; ಅವರಲ್ಲಿ ಹೆಚ್ಚಿನವರು ಶ್ರೀಮಂತರ ಅಡಿಯಲ್ಲಿದ್ದರು, ಆದರೂ ಅವರು ಸಮಂಜಸವಾದ ಕೆಲವನ್ನು ಹೊರತುಪಡಿಸಿ ಬೇರೆ ಯಾವುದೇ ಬೇಡಿಕೆಗಳನ್ನು ಮಾಡುತ್ತಿರಲಿಲ್ಲ. ಈ ಜನರು ಸಹ ಹಲವಾರು ಆನೆಗಳನ್ನು ಹೊಂದಿದ್ದರು, ಇತರ ಭಾರತೀಯರಿಗಿಂತ ಹೆಚ್ಚಿನ ಸಂಖ್ಯೆಯಲ್ಲೇ ಹೊಂದಿದ್ದರು, ಮತ್ತು ಇವು ಅತ್ಯಂತ ದೊಡ್ಡದಾದ, ಧೈರ್ಯಶಾಲಿ ಆನೆಗಳಾಗಿದ್ದವು." ಗಣರಾಜ್ಯಗಳು ಬಿಯಾಸ್ ನದಿಯ ಪಕ್ಕಕ್ಕೇ ಮತ್ತು ನಂದರ ಗಡಿಯ ಪೂರ್ವಕ್ಕೆ ಅಡ್ಡಲಾಗಿ ಇದ್ದಿರಬಹುದಾದ್ದರಿಂದ ಎರಡೂ ಪರಂಪರೆಗಳು ನಿಜವಾಗಿರಬಹುದು. ಹಾಗೆಯೇ, ಪ್ರಾಚೀನ ಕಾಲದಲ್ಲಿ ಆನೆಗಳ ಆವಾಸಸ್ಥಾನದ ಬಗ್ಗೆ ನಮಗೆ ತಿಳಿದಿರುವ, ಬಿಯಾಸ್‌ನ ಪೂರ್ವಕ್ಕೆ ಹೆಚ್ಚಿನ ಸಂಖ್ಯೆಯ ಮತ್ತು ಹೆಚ್ಚಿನ ಗಾತ್ರದ, ಶಕ್ತಿಶಾಲಿ ಆನೆಗಳು ಇದ್ದವು ಎಂಬ ವಿಷಯಕ್ಕೆ ಇದು ಅನುಗುಣವಾಗಿದೆ. ಹಾಗಾಗಿ, ಇಲ್ಲಿಯವರೆಗೆ ಯಾವುದೇ ವಿರೋಧಾಭಾಸಗಳಿಲ್ಲ. ಆದರೆ ಒಂದು ಪುರಾತನ ಮೂಲವು - ಅಲೆಕ್ಸಾಂಡರ್ ಇತಿಹಾಸಕಾರನಲ್ಲ, ಬದಲಾಗಿ ಭೂಗೋಳಶಾಸ್ತ್ರಜ್ಞನಾದ ಸ್ಟ್ರಾಬೊ - ನಿಸ್ಸಂದೇಹವಾಗಿ ಅದೇ ಜನರ ಬಗ್ಗೆ ಮಾತನಾಡುತ್ತಾ, "ಅವರು ಐದು ಸಾವಿರ ಸಲಹೆಗಾರರನ್ನು ಒಳಗೊಂಡಿರುವ ಒಂದು ರೀತಿಯ ಶ್ರೀಮಂತ ಆಡಳಿತದ ಬಗ್ಗೆಯೂ ಹೇಳುತ್ತಾರೆ, ಪ್ರತಿಯೊಬ್ಬ ಸಲಹೆಗಾರನೂ ಹೊಸ ಸಂಘಟನೆಗೆ ಒಂದು ಆನೆಯನ್ನು ಒದಗಿಸುತ್ತಾನೆ" ಎಂದು ಹೇಳುತ್ತದೆ. ಗಣರಾಜ್ಯದಲ್ಲಿ 5,000 ಆನೆಗಳಿವೆ ಎಂಬ ಈ ಸಂಖ್ಯೆಯುಳ್ಳ ಈ ಸಾಹಿತ್ಯದ ಭಾಗವು ಮಾತ್ರ ಯುದ್ಧದ ಆನೆಗಳ ವಿಷಯದಲ್ಲಿ ಭಾರತೀಯ ರಾಜ್ಯಗಳು ಗಣರಾಜ್ಯಗಳಿಗಿಂತ ಹೆಚ್ಚು ಶ್ರೇಷ್ಠವಾಗಿವೆ ಎಂಬ ನನ್ನ ಅಭಿಪ್ರಾಯಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಗ್ರೀಕ್ ಬರಹಗಾರರು ತಮ್ಮ ಅಜ್ಞಾನ ಮತ್ತು ದೂರತ್ವದ ಕಾರಣದಿಂದಾಗಿ, ಬಿಯಾಸ್ನ ನದಿಯಾಚೆಯ ಭಾಗದ ಭಾರತವನ್ನು ಹೇಗೆ ದೊಡ್ಡದಾಗಿ ವರ್ಣಿಸುತ್ತಾರೆ ಅಥವಾ ಅದ್ಭುತವೆಂಬಂತೆ ವಿವರಿಸುತ್ತಾರೆ ಎಂಬುದಕ್ಕೆ ಸ್ಟ್ರಾಬೊ ಇದನ್ನು ಉದಾಹರಣೆಯಾಗಿ ನೀಡುತ್ತಾರೆ; ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸ್ವತಃ ಅವರೇ ಈ ಸಂಖ್ಯೆಯನ್ನು ತುಂಬಾ ದೊಡ್ಡ ಸಂಖ್ಯೆ ಎಂದು ಪರಿಗಣಿಸಿದ್ದರು. ಮುಂದಿನ ವಿಭಾಗದಲ್ಲಿ ನಾನು ಸ್ಟ್ರಾಬೊ ಭಾರತದ ಬಗೆಗಿನ ಗ್ರೀಕ್ ಬರಹಗಾರರ ಬಗ್ಗೆ ತುಂಬಾ ಸಂದೇಹವನ್ನು ಹೊಂದಿದ್ದಾನೆ ಎಂದು ವಾದಿಸುತ್ತೇನೆ ಮತ್ತು ಈ ವಿಷಯದಲ್ಲಿ ಅವನ ನಿಲುವು ತಪ್ಪಾಗಿದೆ ಎಂಬುದಕ್ಕೆ ಉದಾಹರಣೆಯನ್ನು ನೀಡುತ್ತೇನೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಅವನು ಹೇಳಿದ್ದು ಸರಿ: ಯಾವುದೇ ಗಣರಾಜ್ಯವು 5,000 ಯುದ್ಧದ ಆನೆಗಳನ್ನು ನಿರ್ವಹಿಸಲು ಸಾಧ್ಯವಿಲ್ಲ. ಈ ಸಂಖ್ಯೆಯು ಅದರ ಸಮಯದ ಅತ್ಯಂತ ಗಣನೀಯ ಆಡಳಿತವಾದ ನಂದರ ಬಳಿ ಇದ್ದ ಆನೆಗಳ ಸಂಖ್ಯೆಗಿಂತ ಹೆಚ್ಚಿದೆ. ಅಲೆಕ್ಸಾಂಡರ್ ಇತಿಹಾಸಕಾರರು ಇತರ

ಗಣರಾಜ್ಯಗಳ ಬಗ್ಗೆ ಹೇಳುವ ವಿಷಯಕ್ಕೆ ಹೋಲಿಸಿದರೆ, ಇದು ವಿಶ್ವಾಸಾರ್ಹ ಅಥವಾ ಸುಸಂಗತವಾದುದಲ್ಲ.

ಆನೆಗಳು ಮತ್ತು ಮೌರ್ಯರು

ಅರಕೋಸಿಯಾದ ಸತ್ರಾಪ್, ಸಿಬಿರ್ಟಿಯಸ್‌ನ (ಇದರ ರಾಜಧಾನಿ ಅಲೆಕ್ಸಾಂಡ್ರಿಯಾ ದಕ್ಷಿಣ ಆಫ್ಘಾನಿಸ್ತಾನದಲ್ಲಿನ ಇಂದಿನ ಕಂದಹಾರ್) ಆಶ್ರಯದಲ್ಲಿದ್ದಾಗ ಮೆಗಾಸ್ತನೀಸ್‌ನನ್ನು ಮೊದಲ ಮೌರ್ಯ ಚಕ್ರವರ್ತಿ ಚಂದ್ರಗುಪ್ತನ ಆಸ್ಥಾನಕ್ಕೆ ರಾಯಭಾರಿಯಾಗಿ ಕಳುಹಿಸಲಾಗಿತ್ತು. ಅವನು ಸರಳವಾಗಿ *ಇಂಡಿಕಾ* ಎಂದು ಕರೆಯಲಾಗುವ ಅತ್ಯಮೂಲ್ಯವಾದ ಕಥನವನ್ನು ಬರೆದನು. ಅವನು ಸಿಬಿರ್ಟಿಯಸ್‌ನಿಂದ ಕಳುಹಿಸಲ್ಪಟ್ಟಿದ್ದನೋ ಅಥವಾ ಸೆಲ್ಯೂಕಸ್‌ನಿಂದ ಕಳುಹಿಸಲ್ಪಟ್ಟಿದ್ದನೋ ಎಂಬುದು ವಿವಾದಾಸ್ಪದವಾಗಿದೆ - ಸೆಲ್ಯೂಕಸ್ ಅಲೆಕ್ಸಾಂಡರ್‌ನ ಜನರಲ್ ಆಗಿದ್ದನು. ಅಲೆಕ್ಸಾಂಡರ್‌ನ ಮರಣದ ನಂತರ ಅಧಿಕಾರಕ್ಕಾಗಿ ನಡೆದ ಕಚ್ಚಾಟದಲ್ಲಿ ತನ್ನನ್ನು ತಾನು ಸಿರಿಯಾದ ರಾಜನನ್ನಾಗಿ ಘೋಷಿಸಿಕೊಂಡನು, ಮತ್ತು ಅಂತಿಮವಾಗಿ ಭಾರತದಲ್ಲಿನ ಪಂಜಾಬ್ವರೆಗೆ ಅಲೆಕ್ಸಾಂಡರ್ ಗೆದ್ದ ಎಲ್ಲಾ ಪೂರ್ವದ ರಾಜ್ಯಗಳಿಗೂ ರಾಜನಾದನು. ಆದರೆ ಇದು ನನ್ನ ಅಧ್ಯಯನದ ಮೇಲೆ ಪರಿಣಾಮ ಬೀರದ ಕಾರಣ ನಾನು ಆ ವಿಷಯವನ್ನು ಬದಿಗಿಡುತ್ತೇನೆ. ಇಲ್ಲಿ ಸಮಂಜಸವಾದ ವಿಷಯವೆಂದರೆ, ಸೆಲ್ಯೂಕಸ್‌ನು ಚಂದ್ರಗುಪ್ತನ ಜೊತೆ ಒಂದು ಸಂಧಿಯನ್ನು ಮಾಡಿಕೊಂಡು, ಆ ಮೂಲಕ ಅವನು 500 ಆನೆಗಳನ್ನು ಹೊಂದಿದನು, ಮತ್ತು ತನ್ನ ಪೂರ್ವದ ಸತ್ರಪಿಗಳನ್ನು ಮೌರ್ಯರಿಗೆ ಬಿಟ್ಟುಕೊಟ್ಟನು, ಈ ವಿಷಯವನ್ನು ನಾವು ಮತ್ತೆ ಚರ್ಚಿಸಲಿದ್ದೇವೆ.

ಮೆಗಾಸ್ಥನೀಸ್‌ನ *ಇಂಡಿಕಾ* ಕೃತಿಯು ವಿಶೇಷವಾಗಿ ಆನೆಗಳು ಮತ್ತು ಮೌರ್ಯರ ಸೈನ್ಯದ ಬಗ್ಗೆ ಆಸಕ್ತಿಯನ್ನು ಹೊಂದಿದ್ದು, ನಮ್ಮ ಉದ್ದೇಶವನ್ನು ಸಲಹುವ ಮಾಹಿತಿಯನ್ನು ಒದಗಿಸುತ್ತದೆ. ಆದರೆ ನಾವು ಅದನ್ನು ಪರಿಶೀಲಿಸುವ ಮೊದಲು ನಾನು ಅದರ ತೊಂದರೆಗಳು ಮತ್ತು ಮಿತಿಗಳ ಬಗ್ಗೆ ಹೇಳಲೇಬೇಕು. ಪ್ರಾಚೀನ ಹಸ್ತಪ್ರತಿಗಳನ್ನು ಬೇಗನೆ ಹಾಳಾಗುವ ವಸ್ತುಗಳ ಮೇಲೆ ಬರೆಯಲಾಗಿರುತ್ತದೆ ಮತ್ತು ಸಾಂಗ್ ರಾಜವಂಶದ ಸಮಯದಲ್ಲಿ ಚೀನಿಯರು ಕಂಡುಹಿಡಿದ ಮರದ ಬ್ಲಾಕ್ ಮುದ್ರಣದ ಮೂಲಕ ಕಾಗದದ ಮೇಲೆ ಬಹು ಪ್ರತಿಗಳನ್ನು ತಯಾರಿಸುತ್ತಿದ್ದಕ್ಕೂ ಮೊದಲು ಪ್ರಾಚೀನ ಪಠ್ಯದ ಉಳಿವು ನಿರಂತರವಾಗಿ ಕೈಯಿಂದ ಪ್ರತಿಗಳನ್ನು ತಯಾರಿಸುವುದನ್ನು ಅವಲಂಬಿಸಿತ್ತು. ನಂತರದ ಪುಸ್ತಕಗಳು ಮುಂಚಿನ ಪುಸ್ತಕಗಳನ್ನು ಮರೆಮಾಡಿರಬಹುದು, ಮತ್ತು ಆ ಮೂಲಕ ಅವುಗಳನ್ನು ನಕಲು ಮಾಡುವುದನ್ನು ನಿಲ್ಲಿಸಿರಬಹುದು; ಮೆಗಾಸ್ತನೀಸ್‌ನ *ಇಂಡಿಕಾ* ಮತ್ತು ಅಲೆಕ್ಸಾಂಡರ್‌ನ ಸಮಕಾಲೀನರು ಬರೆದ ಅವನ ಇತಿಹಾಸಗಳ ವಿಷಯದಲ್ಲೂ ಇದೇ ರೀತಿ ಆಯಿತು. ಈ ಎಲ್ಲಾ

ಪುಸ್ತಕಗಳು ನಂತರದ ಪುಸ್ತಕಗಳ ಉಲ್ಲೇಖಗಳಲ್ಲಿ ತುಣುಕುಗಳಾಗಿ ಮಾತ್ರ ಉಳಿದುಕೊಂಡಿವೆ. ಈ ತುಣುಕುಗಳನ್ನು ಮತ್ತೆ ಜೋಡಿಸಬಹುದಾದರೂ, ನಂತರದ ಉಳಿದಿರುವ ಕೃತಿಗಳಲ್ಲಿ ಆ ತುಣುಕುಗಳ ಕುರಿತಾದ ಯಾವ ಉಲ್ಲೇಖವು ಇರುವುದಿಲ್ಲವಾದ್ದರಿಂದ ಅಲ್ಲಿ ಅಂತರಗಳು ಉಳಿದುಬಿಡುತ್ತವೆ. ಆದ್ದರಿಂದ ಆ ತುಣುಕನ್ನು ನಿಖರವಾಗಿ ಉಲ್ಲೇಖಿಸಲಾಗಿದೆಯೇ; ಅಥವಾ, ಒಂದು ತುಣುಕಿನ ಮೂಲ ಪಠ್ಯವು ಅದನ್ನು ಉಲ್ಲೇಖಿಸಿದ ನಂತರದ ಪಠ್ಯದ ಉದ್ದೇಶಕ್ಕೆ ಅನುಗುಣವಾಗಿ ಹೇಗೆ ಬದಲಾಯಿಸಲ್ಪಟ್ಟಿದೆ ಎಂಬ ಬಗ್ಗೆ ಯಾವಾಗಲೂ ಪ್ರಶ್ನೆಯು ಇದ್ದೇ ಇರುತ್ತದೆ. ಈ ಸಮಸ್ಯೆಯನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಒಳ್ಳೆಯದು.

ಮೆಗಾಸ್ತನೀಸ್‌ನ *ಇಂಡಿಕಾದ* ತುಣುಕುಗಳಿಂದ ಅದನ್ನು ಪುನರ್ನಿರ್ಮಿಸಲಾಗಿದ್ದು, ಭಾರತದ ಫಲವತ್ತತೆಯು ವರ್ಷಕ್ಕೆ ಎರಡು ಬೆಳೆಗಳನ್ನು ನೀಡುತ್ತದೆ ಮತ್ತು ಪರಿಣಾಮವಾಗಿ, ಇಲ್ಲಿ ದೊಡ್ಡ ಜನಸಂಖ್ಯೆ ಇದೆ ಎಂಬ ಭಾವಾವೇಶದ ವಿವರಣೆಯೊಂದಿಗೆ ಪ್ರಾರಂಭವಾಗುತ್ತದೆ. ಇದೇ ಕಾರಣದಿಂದ ಭಾರತದ ಆನೆಗಳು ಲಿಬಿಯಾದ (ಗ್ರೀಕರಿಗೆ ತಿಳಿದಿರುವ ಆಫ್ರಿಕಾದ ಬಗ್ಗೆ ಹೇಳುವುದಾದರೆ) ಆನೆಗಳಿಗಿಂತ ದೊಡ್ಡದಾಗಿಯೂ, ಹೇರಳವಾಗಿಯೂ ಇವೆ: “[ಭಾರತವು] ದೊಡ್ಡ ಆನೆಗಳನ್ನು ಹೇರಳವಾಗಿ ಉತ್ಪಾದಿಸಿ, ಅವುಗಳಿಗೆ ಸಮೃದ್ಧವಾದ ಪೋಷಣೆಯನ್ನು ನೀಡುತ್ತದೆ; ಈ ಕಾರಣದಿಂದಾಗಿ ಲಿಬಿಯಾದಲ್ಲಿ ಉತ್ಪತ್ತಿಯಾಗುವ ಸಂಖ್ಯಾ ಶಕ್ತಿಯನ್ನು ಇಲ್ಲಿನ ಪ್ರಾಣಿಗಳು ಬಹಳವಾಗಿ ಮೀರಿಸುತ್ತವೆ. ಆದ್ದರಿಂದ ಅವುಗಳಲ್ಲಿ ಅನೇಕ ಆನೆಗಳನ್ನು ಭಾರತೀಯರು ಸೆರೆಹಿಡಿದು ಯುದ್ಧದ ತರಬೇತಿಯನ್ನು ನೀಡುತ್ತಾರೆ ಮತ್ತು ವಿಜಯವನ್ನು ಸಾಧಿಸುವಲ್ಲಿ ಅವು ವಿಶೇಷವಾಗಿ ಪರಿಣಾಮಕಾರಿಯಾಗಿದ್ದವು.” ನಾವು ಮುಂದೆ ನೋಡುವಂತೆ, ಉತ್ತರ ಆಫ್ರಿಕಾದ ಆನೆಗಳು ಆ ಸಮಯದಲ್ಲಿ ಒಂದು ಸಣ್ಣ ವರ್ಗ ಅಥವಾ ಪ್ರಭೇದಕ್ಕೆ (ಲೋಕ್ಸೊಡೊಂಟಾ ಆಫ್ರಿಕಾನಾ ಸೈಕ್ಲೋಟಿಸ್) ಸೇರಿದ್ದು, ಕಾಡಾನೆಗಳು ಎಂದು ಕರೆಯಲ್ಪಡುತ್ತಿದ್ದವು, ಅವು ಏಷ್ಯಾದ ಆನೆಯಷ್ಟು ದೊಡ್ಡದಾಗಿರಲಿಲ್ಲ. ಪ್ರಾಚೀನ ಲೇಖಕರು ಏಷ್ಯನ್ ಆನೆಯೇ ದೊಡ್ಡದು ಎಂದು ನಿಯಮಿತವಾಗಿ ದೃಢೀಕರಿಸುತ್ತಾರೆ.

ಮೆಗಾಸ್ತನೀಸ್ ಚಂದ್ರಗುಪ್ತನ ಸಮಯದ ಭಾರತದ ಸಮಾಜ ಮತ್ತು ಸರ್ಕಾರದ ಮೌಲ್ಯಯುತವಾದ ವಿಶ್ಲೇಷಣೆಯನ್ನು ನೀಡುತ್ತಾನೆ. ಸಾಮಾಜಿಕ ವರ್ಗವನ್ನು ಏಳು ಗುಂಪುಗಳಾಗಿ ವಿಂಗಡಿಸಲಾಗಿತ್ತು ಮತ್ತು ಪರಸ್ಪರ ಅವರುಗಳ ನಡುವೆ ವಿವಾಹವಾಗುತ್ತಿರಲಿಲ್ಲ. ಒಂದು ರೀತಿಯಲ್ಲಿ ಇದು ನಾಲ್ಕು ಪ್ರಮುಖ ವರ್ಣಗಳಾದ ಪುರೋಹಿತ (ಬ್ರಾಹ್ಮಣ), ಯೋಧ (ಕ್ಷತ್ರಿಯ), ರೈತ ಅಥವಾ ವ್ಯಾಪಾರಿ (ವೈಶ್ಯ), ಮತ್ತು ಜೀತದಾಳು(ಶೂದ್ರ)ಗಳನ್ನು ಒಳಗೊಂಡ ಜಾತಿ ವ್ಯವಸ್ಥೆಯ ವಿಚಿತ್ರವಾದ ವಿವರಣೆಯಾಗಿದೆ. ಇದು ಭಾರತೀಯ ಮೂಲಗಳಲ್ಲಿ ಪ್ರತಿನಿಧಿಸಲ್ಪಟ್ಟಿರುವ ಸಾಮಾಜಿಕ ವಿಭಾಗಗಳಿಗೆ

ಹೊಂದಿಕೆಯಾಗದ ಹೆಚ್ಚುವರಿ ಕ್ರಿಯಾತ್ಮಕ ವಿಭಾಗಗಳ ಪರಿಚಯದಿಂದ ಮತ್ತಷ್ಟು ಸಂಕೀರ್ಣವಾಗಿದೆ. ನಮ್ಮ ಉದ್ದೇಶಗಳಿಗಾಗಿ ಮೆಗಾಸ್ತನೀಸ್‌ನ ಕೃತಿಯಲ್ಲಿನ ಎರಡು ಪ್ರಮುಖ ಹಾಗೂ ಮೊದಲ ಮತ್ತು ಎರಡನೇ ದೊಡ್ಡ ಜಾತಿಗಳೆಂದರೆ ಅವು, ರೈತರು ಮತ್ತು ಯೋಧರು.

ಮೆಗಾಸ್ತನೀಸ್‌ನ ವರ್ಣನೆಯಲ್ಲಿ ರೈತರ ಕುರಿತಾದ ಅತ್ಯಂತ ಗಮನಾರ್ಹವಾದ ಅಂಶವೆಂದರೆ ಅವರು ಯುದ್ಧಕ್ಕೆ ಹೋಗುವುದಿಲ್ಲ - ಅವರು ನಿರಾಯುಧ ರೈತರು; ಅವರು ಮತ್ತು ಅವರ ಭೂಮಿಯು ಅಕಳಂಕಿತವಾಗಿದ್ದು, ಅವರಿಗೆ ಸೇನೆಯಿಂದ ತೊಂದರೆಯಾಗುವುದಿಲ್ಲ. ರೈತರು ತಮ್ಮ ಕೆಲಸವನ್ನು ಶಾಂತಿಯುತವಾಗಿ ನಿರ್ವಹಿಸುತ್ತಿರುವಾಗ ಯೋಧರು ಒಬ್ಬರನ್ನೊಬ್ಬರು ಕೊಂದುಕೊಳ್ಳುವ ಆಕರ್ಷಕ ಚಿತ್ರಣವನ್ನುಳ್ಳ ಮೆಗಾಸ್ತನೀಸ್‌ನ ಈ ವಿಷಯದ ಕುರಿತಾದ ಅರ್ರಿಯನ್ ಅವರ ನಿರೂಪಣೆ ಇಲ್ಲಿದೆ: “ರೈತರು . . . ಭಾರತೀಯರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರು ಯಾವುದೇ ಸೇನಾ ಶಸ್ತ್ರಾಸ್ತ್ರಗಳನ್ನು ಹೊಂದಿಲ್ಲ ಮತ್ತು ಯುದ್ಧದ ವಿಷಯಗಳಲ್ಲಿ ಭಾಗವಹಿಸುವುದಿಲ್ಲ, ಆದರೆ ಅವರು ಭೂಮಿಯಲ್ಲಿ ಉಳುಮೆ ಮಾಡಿ ರಾಜರು ಮತ್ತು ಸ್ವಾಯತ್ತ ನಗರಗಳಿಗೆ ತೆರಿಗೆಯನ್ನು ಪಾವತಿಸುತ್ತಾರೆ. ಭಾರತೀಯರ ನಡುವೆ ಯುದ್ಧ ಸಂಭವಿಸಿದರೆ, ಇವರ ಭೂಮಿಯ ಮೇಲೆ ದಾಳಿ ಮಾಡುವುದು ಅಥವಾ ಭೂಮಿಯನ್ನು ಧ್ವಂಸ ಮಾಡುವುದು ಕಾನೂನುಬಾಹಿರವಾಗಿದೆ. ಕೆಲವರು ಅವಕಾಶ ಒದಗಿದಂತೆಲ್ಲಾ ಯುದ್ಧವನ್ನು ಮಾಡಿ ಒಬ್ಬರನ್ನೊಬ್ಬರು ಕೊಲ್ಲುತ್ತಿದ್ದರೆ, ಅಲ್ಲೇ ಹತ್ತಿರದಲ್ಲಿ ಇನ್ನೂ ಕೆಲವರು ಸದ್ದಿಲ್ಲದೆ ಉಳುಮೆ, ಅಥವಾ ಕೊಯ್ಲು ಅಥವಾ ಸಮರುವಿಕೆ ಅಥವಾ ಕಟಾವು ಮಾಡುತ್ತಿರುತ್ತಾರೆ. ಯುದ್ಧದ ಸಮಯದಲ್ಲಿ ರೈತರ ನಿಸ್ಸೈನ್ಯೀಕರಣ ಮತ್ತು ಕೃಷಿ ಭೂಮಿಯ ಅತಿಕ್ರಮಣ ಮಾಡದಿರುವಿಕೆ, ಎರಡರಲ್ಲೂ ಗ್ರೀಕರು ಮತ್ತು ಮೆಸಿಡೋನಿಯನ್ನರಿಗೆ ತಮ್ಮ ನಾಡಿನ ವ್ಯವಸ್ಥೆಗಳಿಗೆ ಹೋಲಿಸಿದರೆ ಗಮನಾರ್ಹ ವ್ಯತ್ಯಾಸಗಳು ತೋರುತ್ತವೆ. ಅಲ್ಲಿ ಇಡೀ ದೇಶವೇ ಶಸ್ತ್ರಾಸ್ತ್ರಗಳನ್ನುಳ್ಳ ಸೈನ್ಯವಾಗಿತ್ತು ಮತ್ತು ಅಗತ್ಯವಾಗಿ ರೈತರನ್ನೂ ಒಳಗೊಂಡಿತ್ತು ಮತ್ತು ಅಲ್ಲಿ ಬೆಳೆಗಳು ಮತ್ತು ತೋಟಗಳನ್ನು ನಾಶಪಡಿಸುವುದು ಯುದ್ಧದ ವಾಡಿಕೆಯ ಭಾಗವಾಗಿತ್ತು. ಆದರೆ ನಂಬಲರ್ಹವಾಗಿದ್ದಲ್ಲಿ, ಅದು ಭಾರತದಲ್ಲೂ ಒಂದು ದೊಡ್ಡ ಅನುಸರಣೆಯಾಗುತ್ತಿತ್ತು ಮತ್ತು ಇಲ್ಲಿ ಪ್ರತಿ ಯುಗದಲ್ಲೂ ರೈತಸಾಗರವೆಂಬ ಸಮುಚ್ಚಯವೊಂದರ ಮೂಲಕ ಸೈನ್ಯವನ್ನು ಸೆಳೆಯಲಾಗುತ್ತಿತ್ತು. ರೈತರ ನಿಶ್ಯಸ್ತ್ರಗೊಳಿಸುವಿಕೆಯು ಬಹುಶಃ ಮೌರ್ಯರ ನವೀನ ಕಲ್ಪನೆಯಾಗಿದ್ದು, ಇದಕ್ಕೆ ವಿರುದ್ಧವಾಗಿ, ದೊಡ್ಡ ಗಾತ್ರದ ರೈತರ ಸಂಖ್ಯೆ ಮತ್ತು ಅದರ ಸೇನಾ ಕಲೆಗಳ ಕೃಷಿಯು ಒಂದು ರೀತಿಯ ಅಕಾಲಿಕ ಉದ್ಯೋಗವಾಗಿದ್ದ ವೈದಿಕ ಯುಗದಲ್ಲಿ ಅಥವಾ ನಂತರದ ಕಾಲದಲ್ಲಿ ಇದು ಕಂಡುಬರುವುದಿಲ್ಲ. ಅದರ ಇತಿಹಾಸದ ಬಹುಪಾಲು ಸಮಯ ಭಾರತೀಯ ಸೇನೆಗಳ ಬೃಹತ್ ಪರಿಮಾಣವನ್ನು ರೈತರ ಪೈಕಿಯೇ ನೇಮಕಮಾಡಿಕೊಳ್ಳಲಾಗುತ್ತಿತ್ತು.

ಮೆಗಾಸ್ತನೀಸ್‌ನ ವಿವರಣೆಯ ಪ್ರಕಾರ, ಯುದ್ಧದಿಂದ ರೈತರನ್ನು ದೂರವಿಡುವುದು ಯೋಧರ ವರ್ಗವನ್ನು ಭೂಮಿಯಿಂದ ದೂರವಿಡುವುದಕ್ಕೆ ಸಮಾನವಾಗಿಯೂ, ವಿರುದ್ಧವಾಗಿಯೂ ಇದೆ. ಕ್ಷತ್ರಿಯರ ಹಳೆಯ ವೈದಿಕ ಯೋಧ ವರ್ಗ ಮತ್ತು ಅವರ ವಂಶಸ್ಥರ ಎಲ್ಲಾ ವಿವರಣೆಗಳು ಮತ್ತು ಭಾರತೀಯ ವಾಯುವ್ಯ ಪ್ರದೇಶದ ಅಲೆಕ್ಸಾಂಡರ್ ಇತಿಹಾಸಕಾರರ ವಿವರಣೆಗಳಿಗೆ ಇದು ವಿರುದ್ಧವಾಗಿರುವುದರಿಂದ, ಇದೂ ಸಹ ಮೌರ್ಯರ ಆವಿಷ್ಕಾರವೇ ಆಗಿರಬಹುದು. ಆ ವರ್ಗವು ಖಂಡಿತವಾಗಿಯೂ ಸಮೃದ್ಧವಾಗಿದ್ದು, ಒಳ್ಳೆಯ ಕೃಷಿಭೂಮಿ ಮತ್ತು ಅಧೀನ ಅಧಿಕಾರಿಗಳನ್ನು ಹೊಂದಿತ್ತು, ಆಯುಧಗಳು ಮತ್ತು ರಥಗಳನ್ನು ಹೊಂದಿದ್ದು, ಅವುಗಳನ್ನು ಯುದ್ಧಕ್ಕೆ ತರುತ್ತಿತ್ತು. ಚಂದ್ರಗುಪ್ತನ ಸಾಮ್ರಾಜ್ಯದಲ್ಲಿ, ಸೈನ್ಯವು ಸಂಪೂರ್ಣವಾಗಿ ರಾಜ್ಯವು ಪಾವತಿಸಿದ ವೇತನದಿಂದ ಬೆಂಬಲಿತವಾಗಿದ್ದು, ಯುದ್ಧವು ಮುಗಿದ ನಂತರ ಹಿಂತಿರುಗಲು ಯಾವುದೇ ಕೃಷಿ ಎಸ್ಟೇಟುಗಳನ್ನು ಹೊಂದಿರಲಿಲ್ಲ. ಯೋಧರ ವರ್ಗವು ಭೂಮಾಲೀಕರಾಗಿರಲಿಲ್ಲ. ಅವರು ಶಾಂತಿಕಾಲದಲ್ಲಿ ಕೆಲಸವಿಲ್ಲದೆ ಇರುತ್ತಿದ್ದರು ಮತ್ತು ತಮಗೆಂದೇ ಸೇವಕರನ್ನು ನೇಮಿಸಿಕೊಳ್ಳುವಷ್ಟು ಉತ್ತಮ ಸ್ಥಿತಿಯಲ್ಲಿದ್ದರು:

> ಭಾರತೀಯರ ಐದನೇ ವರ್ಗವು ಯೋಧರದ್ದಾಗಿದೆ. ಸಂಖ್ಯೆಯಲ್ಲಿ ರೈತರ ನಂತರ ಹೆಚ್ಚಿನ ಸ್ವಾತಂತ್ರ್ಯ ಮತ್ತು ತೃಪ್ತಿಯನ್ನು ಅನುಭವಿಸುವವರಲ್ಲಿ ಎರಡನೆಯವರಾಗಿರುವ ಅವರು ಯುದ್ಧದ ಚಟುವಟಿಕೆಗಳಲ್ಲಿ ಮಾತ್ರ ಅನುಭವವನ್ನು ಹೊಂದಿರುತ್ತಾರೆ. ಇತರರು ಅವರಿಗೆ ಆಯುಧಗಳನ್ನು ತಯಾರಿಸುತ್ತಾರೆ, ಅವರ ಕುದುರೆಗಳ ಅಗತ್ಯಗಳನ್ನು ಪೂರೈಸುತ್ತಾರೆ, ಶಿಬಿರಗಳಲ್ಲಿ ಅವರ ಕುದುರೆಗಳನ್ನು ನೋಡಿಕೊಳ್ಳುತ್ತಾ, ಅವರ ಆಯುಧಗಳನ್ನು ಸ್ವಚ್ಛಗೊಳಿಸುತ್ತಾ, ಆನೆಗಳ ಸಾರಥಿಯಾಗುತ್ತಾ, ರಥಗಳನ್ನು ಸಿದ್ಧಪಡಿಸುತ್ತಾ ಮತ್ತು ಓಡಿಸುತ್ತಾ ಇತರರು ಸೇವೆಯನ್ನು ಸಲ್ಲಿಸುತ್ತಾರೆ. ಯುದ್ಧಮಾಡಬೇಕಾದಾಗ, ಅವರು ಯುದ್ಧಮಾಡುತ್ತಾರೆ. ಆದರೆ ಶಾಂತಿಕಾಲದಲ್ಲಿ ಹರ್ಷಚಿತ್ತದಿಂದ ಇರುತ್ತಾರೆ ಮತ್ತು ಇತರರನ್ನು ಸುಲಭವಾಗಿ ಬೆಂಬಲಿಸಲು ಅನುವಾಗುವಷ್ಟು ಹೆಚ್ಚು ಹಣವನ್ನು ಅವರು ಸಮುದಾಯದಿಂದ ಪಡೆಯುತ್ತಾರೆ.

ಸೈನ್ಯವು ಬಹಳ ದೊಡ್ಡದಾಗಿದೆ. ಯೋಧರದ್ದು ಎರಡನೇ ದೊಡ್ಡ ಜಾತಿಯಾಗಿದ್ದು, ರೈತರ ನಂತರ ಮಾತ್ರ ಎರಡನೆಯ ಸ್ಥಾನದಲ್ಲಿದ್ದಾರೆ ಎಂದು ಹೇಳುವ ಮೆಗಾಸ್ತನೀಸ್, ಚಂದ್ರಗುಪ್ತನ ಶಿಬಿರದ ಗಾತ್ರವು 400,000 ಎನ್ನುತ್ತಾನೆ. ಒಟ್ಟಾರೆಯಾಗಿ ತೆಗೆದುಕೊಂಡರೆ, ನಾವು ಒಂದು ದೊಡ್ಡ ಖಜಾನೆಯನ್ನು ಮತ್ತು ತೆರಿಗೆಯ ಸಶಕ್ತ ವ್ಯವಸ್ಥೆಯನ್ನು ಊಹಿಸುತ್ತೇವೆ. ಮೌರ್ಯ ಪದ್ಧತಿಯ ಅಂಶಗಳು ನಂದರಿಂದ ಪ್ರಾರಂಭವಾಗಿರುವ ಎಲ್ಲಾ ಸಾಧ್ಯತೆಯೂ ಇದೆ. ನಂದರು ತೆರಿಗೆಯ ವ್ಯಾಪ್ತಿಯನ್ನು ಮತ್ತು ತಮ್ಮ ಸಂಪತ್ತನ್ನು ಅದ್ಭುತ ಪ್ರಮಾಣದಲ್ಲಿ ವಿಸ್ತರಿಸಿದ್ದ ಖ್ಯಾತಿಯನ್ನು ಹೊಂದಿದ್ದರು. ವೈದಿಕ ಪರಂಪರೆಯಲ್ಲಿ ಅವರು ವೈದಿಕ ಯೋಧ ವರ್ಗವನ್ನು ನಾಶಪಡಿಸಿದ್ದಾರೆ ಎಂದು ಹೇಳಲಾಗುತ್ತದೆ. ಮೌರ್ಯರ ಪರಿಪಾಠವನ್ನು ಕುರಿತ ಮೆಗಾಸ್ತನೀಸ್‌ನ ಸಾಕ್ಷ್ಯವನ್ನು ಗಮನಿಸಿದಾಗ, ಇದು ಭೂಮಿ ಹೊಂದಿದ ಯೋಧರ ವರ್ಗಕ್ಕಿಂತ

ಹೆಚ್ಚಾಗಿ ವೇತನ ಪಡೆಯುತ್ತಿದ್ದ ಸೈನಿಕರ ಮೇಲಿನ ಅವಲಂಬನೆಯನ್ನು ಸೂಚಿಸುತ್ತದೆ. ಮೌರ್ಯರ ಸೇನಾ ವ್ಯವಸ್ಥೆಯ ಪೂರ್ವನಿದರ್ಶನಗಳು ಏನೇ ಇರಲಿ, ಬೆಳೆಯುತ್ತಿರುವ ಚಂದ್ರಗುಪ್ತನ ಸಾಮ್ರಾಜ್ಯದ ಹೊರಗೆ ಭಾರತೀಯ ರಾಜ್ಯಗಳಲ್ಲಿ ಇನ್ಯಾವುದೂ ಇದರಂತೆ ಇರಲಿಲ್ಲ.

ಇದರಿಂದ, ಈ ವಿಧಾನಗಳ ಮೂಲಕ, ಸೈನ್ಯ ಬಲದ ಕೇಂದ್ರೀಕರಣ ಮತ್ತು ವಿಸ್ತರಣೆಯು ಚಂದ್ರಗುಪ್ತನ ಸಾಮ್ರಾಜ್ಯ ವಿಸ್ತರಣೆಯಲ್ಲಿ ಅವನಿಗಾದ ಅನುಕೂಲಗಳ ಪೈಕಿ ಒಂದು ದೊಡ್ಡ ಭಾಗವಾಗಿದೆ ಎಂಬ ತೀರ್ಮಾನಕ್ಕೆ ನಾನು ಬರುತ್ತೇನೆ. ಮೆಗಾಸ್ತನೀಸ್, ಮೌರ್ಯರ ಆಡಳಿತದ ಬಗ್ಗೆ ಹೇಳುವಾಗ ಈ ಸೇನಾ ಪ್ರಯೋಜನವು ಸ್ಪಷ್ಟವಾಗಿ ಕಂಡುಬರುತ್ತದೆ.

ಆಡಳಿತದಲ್ಲಿ ಮೂರು ಪ್ರಮುಖ ಭಾಗಗಳು ಇವೆ ಎಂಬಂತೆ ಮೆಗಾಸ್ತನೀಸ್ ಚಿತ್ರಿಸುತ್ತಾನೆ: ದೇಶ, ನಗರ ಮತ್ತು ಸೇನಾ ಆಡಳಿತ. ಈ ಪ್ರತಿಯೊಂದೂ ಐದು ಜನರ ಮಂಡಳಿಯಿಂದ ನಿರ್ದೇಶಿಸಲ್ಪಟ್ಟು, ಮತ್ತೆ ಇವುಗಳ ಪೈಕಿ ಪ್ರತಿಯೊಂದೂ ಆರು ಕ್ರಿಯಾತ್ಮಕ ವಿಭಾಗಗಳನ್ನು ಹೊಂದಿರುತ್ತದೆ. ನಾಗರಿಕ ಆಡಳಿತದ ದೇಶ/ನಗರ ಎಂಬ ವ್ಯತ್ಯಾಸವು ಭಾರತೀಯ ಪಠ್ಯಗಳಲ್ಲಿ ಕಂಡುಬರುವ ವಿಷಯಗಳಿಗೆ ಹೊಂದಿಕೆಯಾಗುತ್ತದೆ. ದೇಶದ ಆಡಳಿತವು ಮುಖ್ಯವಾಗಿ ರೈತರು, ಪಶುಚಾರಕರು ಮತ್ತು ಇತರ ಗ್ರಾಮೀಣ ಉತ್ಪಾದಕರಿಗೆ ತೆರಿಗೆ ವಿಧಿಸುವ ಕೆಲಸ ಮಾಡಿದರೆ, ನಗರ ಆಡಳಿತವು ಮಾರುಕಟ್ಟೆಗಳ ತೆರಿಗೆ, ನಿಯಂತ್ರಣ ಮತ್ತು ಇತರ ಕೆಲಸಗಳನ್ನು ಮಾಡುತ್ತದೆ. ಸೇನಾ ಆಡಳಿತವು ನಾವು ನಿರೀಕ್ಷಿಸಿದಂತೆ, ಚತುರಂಗ ಸೈನ್ಯದ ವಿವಿಧ ಭಾಗಗಳ ಪೈಕಿ ವಿಂಗಡಿಸಲ್ಪಟ್ಟಿದೆ, ಜೊತೆಗೆ ಸೈನ್ಯಕ್ಕೆ ದೋಣಿಗಳು ಮತ್ತು ಎತ್ತುಗಳನ್ನು ಪೂರೈಸಲು ಮೀಸಲಾದ ವಿಭಾಗಗಳು ಸಹ ಇವೆ. ಈ ಸನ್ನಿವೇಶದಲ್ಲಿಯೇ ಶಸ್ತ್ರಾಸ್ತ್ರಗಳು, ಕುದುರೆಗಳು ಮತ್ತು ಆನೆಗಳ ಎಲ್ಲಾ ಪ್ರಮುಖ ರಾಜ ಏಕಸ್ವಾಮ್ಯವನ್ನು ವಿವರಿಸಲಾಗಿದೆ. ಇದು ಮೌರ್ಯರ ಗಮನಾರ್ಹವಾದ ಸೇನಾ ವ್ಯವಸ್ಥೆಯ ಚಿತ್ರಣವನ್ನು ಸಂಪೂರ್ಣಗೊಳಿಸುತ್ತದೆ: ಸೈನ್ಯಕ್ಕೆ ಧನಸಹಾಯ ಒದಗಿಸಲು ಹೆಚ್ಚಿನ ತೆರಿಗೆಯನ್ನು ಉತ್ಪಾದಿಸುವ ಒಂದು ನಿಶ್ಯಸ್ತ್ರ ರೈತ ವರ್ಗ; ಖಜಾನೆಯಿಂದ ವೇತನವನ್ನು ಪಡೆಯುವ ಭೂರಹಿತ ಯೋಧ ವರ್ಗ; ಹಾಗೂ ಆನೆಗಳು, ಕುದುರೆಗಳು ಮತ್ತು ಶಸ್ತ್ರಾಸ್ತ್ರಗಳ ಮಾಲೀಕತ್ವವುಳ್ಳ ರಾಜನಿಂದ ಏಕಸ್ವಾಮ್ಯತೆ. ಈ ವ್ಯವಸ್ಥೆಯು ಮೌರ್ಯ ಸಾಮ್ರಾಜ್ಯ ವಿಸ್ತರಣೆಯ ಪ್ರಮುಖ ಸಾಧನವಾಗಿದ್ದು, ಅದರ ಅಭೂತಪೂರ್ವ ಯಶಸ್ಸು, ಅದನ್ನು ನೋಡಿದ ಇತರ ರಾಜರಿಗೂ ಅನುಕರಣೆ ಮಾಡುವಂತೆ ಪ್ರಚೋದಿಸಿರಬಹುದು. ನಂತರ, ಅದು ಪ್ರತಿಯಾಗಿ ಯುದ್ಧದ ಆನೆ ಮತ್ತು ಚತುರಂಗ ಸೈನ್ಯವನ್ನು ಹರಡುವ ಒಂದು ಶಕ್ತಿಯುತ ಸಾಧನವಾಗಿ ಕಾರ್ಯನಿರ್ವಹಿಸಿರಬಹುದು.

ಸ್ಟ್ರಾಬೊ, ತನ್ನ *ಜಿಯಾಗ್ರಫಿ* ಎಂಬ ಕೃತಿಯಲ್ಲಿ, ಮೆಗಾಸ್ತನೀಸ್‌ನಂತಹ ರಾಯಭಾರಿಗಳನ್ನು ಒಳಗೊಂಡಂತೆ ಭಾರತದ ಕುರಿತು ಬರೆದಿರುವ ಬಹುಪಾಲು ಗ್ರೀಕ್ ಲೇಖಕರನ್ನು ವಿಮರ್ಶಾತ್ಮಕವಾಗಿ ನೋಡಿ, ಅವರನ್ನು ಸುಳ್ಳುಗಾರರು ಎಂದು ಹೇಳಿದ್ದಾನೆ. ನಾವು ಈಗಾಗಲೇ ನೋಡಿರುವಂತೆ, ಬಿಯಾಸ್ ನದಿಯಾಚೆಯ ಭಾರತದ ವಿವರಣೆಗಳನ್ನು - ಅಂದರೆ, ಅಲೆಕ್ಸಾಂಡರ್ ತಲುಪಿದ್ದಂತಹ ಪೂರ್ವದ ಮಿತಿಯನ್ನು - ಉತ್ಪ್ರೇಕ್ಷಿಸಲಾಗಿದೆ ಎಂದು ಅವನು ನಂಬುತ್ತಾನೆ ಮತ್ತು ಬಿಯಾಸ್ ನದಿಯ ಶಿಬಿರದ ಪೂರ್ವದಲ್ಲಿ ಸಮೀಪದಲ್ಲೇ ಇದ್ದ ಗಣರಾಜ್ಯಕ್ಕೆ 5,000 ಆನೆಗಳು ಸೇರಿದ್ದವು ಎಂಬ ಒಂದು ವಿಷಯದಲ್ಲಿ ನಾನು ಅವನ ಅನುಮಾನವನ್ನು ಅನುಮೋದಿಸುತ್ತೇನೆ. ಇನ್ನೊಂದು ವಿಷಯದಲ್ಲಿ ಸ್ಟ್ರಾಬೊ ಸಂಪೂರ್ಣವಾಗಿ ತಪ್ಪಾಗಿದ್ದಾನೆ. ಆದರೆ ಅವನ ಪೂರ್ವಜರ ಬಗೆಗಿನ ಅವನ ಅತಿ-ವಿಮರ್ಶಾತ್ಮಕ ಧೋರಣೆಯು ಅವನನ್ನು ಅರಿವಿಲ್ಲದೆ ಹೆಚ್ಚು ಮಹತ್ವದ ಸಂಗತಿಯ ಮೇಲೆ ಬೆರಳು ತೋರಿಸುವಂತೆ ಮಾಡುತ್ತದೆ. ಭಾರತದ ಬಗ್ಗೆ ಬರೆದ ಲೇಖಕರ ವೈಫಲ್ಯಗಳಲ್ಲಿ ಒಂದು, ಅವರು ಪರಸ್ಪರ ವಿರುದ್ಧವಾಗಿರುವುದು ಎಂದು ಅವನು ವಾದಿಸುತ್ತಾನೆ: ಏಕೆಂದರೆ, ಮೆಗಾಸ್ತನೀಸ್ ಕುದುರೆಗಳು ಮತ್ತು ಆನೆಗಳನ್ನು ಕುರಿತ ರಾಜನ ಏಕಸ್ವಾಮ್ಯತೆಯ ಬಗ್ಗೆ ಮಾತನಾಡಿದ್ದರೆ, ಇದಕ್ಕೆ ವಿರುದ್ಧವಾಗಿ ನಿಯರ್ಚಸ್ ಇವುಗಳ ಖಾಸಗಿ ಮಾಲೀಕತ್ವದ ಬಗ್ಗೆ ಮಾತನಾಡಿದ್ದಾನೆ. ನಾನು ಈಗಾಗಲೇ ಸೂಚಿಸಿದಂತೆ, ಇದು ತಪ್ಪು, ಆದರೆ ಇದು ಹೇಳುವಲ್ಲಿ ಆಗಿರುವ ದೋಷವಾಗಿದೆ. ನಿಯರ್ಚಸ್ ಅಲೆಕ್ಸಾಂಡರ್‌ನ ಒಡನಾಡಿಯಾಗಿದ್ದನು. ಹಾಗಾಗಿ ಅವನ ಸಾಕ್ಷ್ಯವು ಬಿಯಾಸ್ ನದಿಯ (ಪಶ್ಚಿಮ) ವ್ಯಾಪ್ತಿಯಲ್ಲಿನ, ಮೇಲಿನ ಸಿಂಧೂ ಕಣಿವೆಯ ಭಾರತಕ್ಕೆ ಸಂಬಂಧಿಸಿದೆ. ಇಲ್ಲಿ ಕುದುರೆಗಳು, ಆನೆಗಳು ಮತ್ತು ಸಾಗಣೆಯ ಇತರ ವಿಧಾನಗಳ ಖಾಸಗಿ ಮಾಲೀಕತ್ವವು ರೂಢಿಯಲ್ಲಿತ್ತು. ಮತ್ತೊಂದೆಡೆ, ಮೆಗಾಸ್ತನೀಸ್ ಮೌರ್ಯ ಸಾಮ್ರಾಜ್ಯದ ಹೃದಯಭಾಗದ ಪರಿಸ್ಥಿತಿಯನ್ನು ಹೆಚ್ಚು ಪೂರ್ವಕ್ಕೆ, ಮತ್ತು ನಿಯರ್ಚಸ್‌ಗಿಂತ ಸ್ವಲ್ಪ ನಂತರದಲ್ಲಿ ವಿವರಿಸುತ್ತಿದ್ದನು. ಹೀಗಾಗಿ ಇಲ್ಲಿ ಯಾವುದೇ ವಿರೋಧಾಭಾಸವಿಲ್ಲ, ಮತ್ತು ಮೆಗಾಸ್ತನೀಸ್ ಪೌರಸ್ತ್ಯರಲ್ಲಿ ಹುಟ್ಟಿಕೊಂಡ ನಾವೀನ್ಯತೆಯನ್ನು ಸೂಚಿಸುತ್ತಿದ್ದಾನೆ. ಮೆಗಾಸ್ತನೀಸ್ ಭಾರತದ ಬಹುಭಾಗವನ್ನು ಆಕ್ರಮಿಸುವಲ್ಲಿ ಯಶಸ್ವಿಯಾಗಿರುವ ಮೌರ್ಯ ಸಾಮ್ರಾಜ್ಯದ ಸಶಸ್ತ್ರ ಸೇನೆಯ ಅಭೂತಪೂರ್ವ ವೈಶಿಷ್ಟ್ಯಗಳನ್ನು ನಮಗೆ ತೋರಿಸುತ್ತಾನೆ. ಯುದ್ಧದ ಆನೆಯು ಈ ಯಶಸ್ಸಿನ ಕೇಂದ್ರವಾಗಿದೆ.

ಈ ಕೇಂದ್ರೀಯತೆಗೆ, ಹಾಗೂ ಅಲೆಕ್ಸಾಂಡರ್, ಆತನ ಸಹಚರರು ಮತ್ತು ಉತ್ತರಾಧಿಕಾರಿಗಳು ಭಾರತೀಯ ಯುದ್ಧದ ಆನೆಯೊಂದಿಗೆ ಹೊಂದಿದ್ದ ಆಕರ್ಷಣೆಗೆ ಅನುಗುಣವಾಗಿ, ಮೆಗಾಸ್ತನೀಸ್ ಅವುಗಳನ್ನು ಸೆರೆಹಿಡಿಯುವ ವಿಧಾನದ ಕುರಿತು ವಿವರವಾದ ವಿವರಣೆಯನ್ನು ನೀಡುತ್ತಾನೆ. ಸಾಮಾನ್ಯವಾಗಿ, ಪಳಗಿದ ಹೆಣ್ಣು ಆನೆಗಳನ್ನು ಗಾಳವಾಗಿ ಬಳಸುವುದು

ವಿಧಾನವಾಗಿದ್ದು, ಇದು, ಯುದ್ಧಕ್ಕೆ ಸೂಕ್ತವಾದ ದಂತವುಳ್ಳ ದೊಡ್ಡ ಗಂಡು ಆನೆಗಳನ್ನು ಸೆರೆಹಿಡಿಯುವ ಗುರಿಯನ್ನು ಹೊಂದಿದೆಯೇ ಹೊರತು ಕೇವಲ ಕೆಲಸಕ್ಕೆ ಮತ್ತು ಸವಾರಿ ಮಾಡಲು ಉಪಯೋಗವಾಗುವ ಆನೆಗಳನ್ನು ಮಾತ್ರ ಉದ್ದೇಶಿಸಿಲ್ಲ ಎಂದು ತೋರಿಸುತ್ತದೆ. ಈ ವಿಧಾನದಲ್ಲಿ ಒಂದೇ ಒಂದು ಮರದ ಹಲಗೆಯ ಸೇತುವೆಯುಳ್ಳ ದೊಡ್ಡ ವೃತ್ತಾಕಾರದ ಕಂದಕವನ್ನು ಅಗೆದು, ಹೆಣ್ಣು ಆನೆಗಳನ್ನು ಅದರೊಳಗೆ ಹಾಕಲಾಗುತ್ತದೆ. ಕಾಡು ಆನೆಗಳನ್ನು ಹಗಲಿನಲ್ಲಿ ಅದರೊಳಗೆ ಅಟ್ಟಲಾಗುವುದಿಲ್ಲ, ರಾತ್ರಿಯಲ್ಲಿ ಹೆಣ್ಣು ಆನೆಗಳ ವಾಸನೆಯಿಂದ ಸೆಳೆಯಲ್ಪಟ್ಟು ಅವು ಸ್ವತಃ ಆ ದಾರಿಯತ್ತ ಸಾಗುತ್ತವೆ. ಸೇತುವೆಯು ಕಾಣುವವರೆಗೂ ಅವು ಕಂದಕವನ್ನು ಸುತ್ತುತ್ತವೆ, ನಂತರ ಸೇತುವೆಯನ್ನು ದಾಟಲು ಹೋಗಿ ಕಂದಕಕ್ಕೆ ಬೀಳುತ್ತವೆ. ತುಂಬಾ ಚಿಕ್ಕದಾದ ಅಥವಾ ವಯಸ್ಸಾದ ಅಥವಾ ರೋಗಪೀಡಿತ ಆನೆಗಳನ್ನು ಬಿಡುಗಡೆ ಮಾಡಲಾಗುತ್ತದೆ. ವಯಸ್ಕ ಗಂಡಾನೆಗಳ ಸೆರೆಹಿಡಿಯುವಿಕೆಗೆ ಒತ್ತು ನೀಡುವುದು *ಅರ್ಥಶಾಸ್ತ್ರದ* ಸೂಚನೆಯೊಂದಿಗೆ ಹೊಂದಿಕೆಯಾಗುತ್ತದೆ ಮತ್ತು ರಾಜನ ಬಂಧಿತ ಆನೆಗಳ ಹಿಂಡಿನ ಅದೇ ಪರಿಮಾಣೀಕರಿಸಿದ ಜನಸಂಖ್ಯಾ ಮಾಹಿತಿಯನ್ನು ಅಂದರೆ, ಅದರಲ್ಲಿನ ವಯಸ್ಕ ಗಂಡಾನೆಗಳ ಪ್ರಾಬಲ್ಯವನ್ನು ಸೂಚಿಸುತ್ತದೆ. ಹೊಸದಾಗಿ ಸೆರೆಹಿಡಿಯಲಾದ ಆನೆಗಳ ಪಳಗಿಸುವಿಕೆಯ ಬಗ್ಗೆ ಮೆಗಾಸ್ತನೀಸ್ ಸ್ವಲ್ಪ ವಿವರವಾಗಿ ವಿವರಿಸುತ್ತಾನೆ. ಅವುಗಳಿಗೆ ಹಸಿವು ಮತ್ತು ಬಾಯಾರಿಕೆಯಾಗುವಂತೆ ನೋಡಿಕೊಳ್ಳಲಾಗುತ್ತದೆ; ಕೆಚ್ಚೆದೆಯ ನುರಿತ ಬೇಟೆಗಾರರಿಂದ ಅವುಗಳ ಪಾದಗಳನ್ನು (ಹಿಂಗಾಲುಗಳು ಇರಬಹುದು) ಕಟ್ಟಿಹಾಕಿಸಲಾಗುತ್ತದೆ; ಪಳಗಿದ ಆನೆಗಳಿಂದ ಅವು ಬೀಳುವವರೆಗೂ ಹೊಡೆಯಲಾಗುತ್ತದೆ; ಕುತ್ತಿಗೆಗೆ ಚರ್ಮದ ಹಗ್ಗವನ್ನು ಹಾಕಿ, ಕತ್ತಿನ ಚರ್ಮವನ್ನು ಚಾಕುವಿನಿಂದ ಕತ್ತರಿಸಿ, ಎಳೆದಾಗ ಕುಣಿಕೆಯ ಅನುಭವವಾಗುವಂತೆ ಮಾಡಲಾಗುತ್ತದೆ. ಇವೆಲ್ಲಾ ಆನೆಗಳಿಗೆ ನೀಡುವ ಶಿಕ್ಷೆಯಾಗಿದೆ; ಇದರ ನಂತರ ಬಹುಮಾನವೂ ದೊರೆಯುತ್ತದೆ; ತಾಳ, ಮದ್ದಲೆ, ತಬಲಗಳೊಂದಿಗೆ ಲಾಲಿ ಹಾಡುತ್ತಾ ಮಲಗಿಸುವುದರೊಂದಿಗೆ ಇತರವುಗಳನ್ನೂ ಆ ಬಹುಮಾನವು ಒಳಗೊಂಡಿದೆ.

ಮೌರ್ಯ ಸಾಮ್ರಾಜ್ಯವು ಹೆಚ್ಚು ಕಡಿಮೆ ಇಡೀ ಭಾರತ ಉಪಖಂಡಕ್ಕೆ ವಿಸ್ತರಣೆಗೊಳ್ಳುವ ಮೂಲಕ, ಭಾರತದೊಳಗೆ *ಚತುರಂಗಬಲದ* ಆದರ್ಶ ಮತ್ತು ಯುದ್ಧದ ಆನೆಯ ವ್ಯಸ್ಥೆಯ ಸಾರ್ವತ್ರಿಕೀಕರಣವನ್ನು ಪೂರ್ಣಗೊಳಿಸಿತು. ಆ ವಿಸ್ತರಣೆಯ ಹಿಂದೆ ಸೈನ್ಯದ ಹಣಕಾಸು ಮತ್ತು ಸಿಬ್ಬಂದಿಯನ್ನು ಒದಗಿಸುವ ವ್ಯವಸ್ಥಿತವಾದ ಯೋಜನೆ, ಮತ್ತು ಯುದ್ಧ ಸಾಧನಗಳ ರಾಜ ಏಕಸ್ವಾಮ್ಯತೆ ಇತ್ತು. ಮೌರ್ಯ ಸಾಮ್ರಾಜ್ಯ ವಿಸ್ತರಣೆಯ ಅಭೂತಪೂರ್ವ ಯಶಸ್ಸು ಯುದ್ಧದ ಆನೆ ಮತ್ತು ಚತುರಂಗ ಸೈನ್ಯವನ್ನು ಅಳವಡಿಸಿಕೊಳ್ಳಲು ಇತರ ರಾಜರಿಗೆ ಪ್ರಬಲ ಕಾರಣವಾಯಿತು.

ದಕ್ಷಿಣ ಭಾರತ

ದಕ್ಷಿಣ ಭಾರತವು ಇಂದಿಗೂ ಸಹ ಮಾನ್ಸೂನ್ ಕಾಡು, ಕಾಡು ಜನರು ಮತ್ತು ಕಾಡಾನೆಗಳಿಂದ ಸಮೃದ್ಧವಾಗಿದೆ. ಏಷ್ಯಾದ ಕಾಡಾನೆಗಳ ಅತಿದೊಡ್ಡ ಸಂಖ್ಯೆಯು ದಕ್ಷಿಣ ಭಾರತದಲ್ಲಿದೆ. ಆದ್ದರಿಂದ ಯುದ್ಧದ ಆನೆಯು ದಕ್ಷಿಣದಲ್ಲಿ ರಾಜತ್ವ ಪರಿಪಾಠದ ಭಾಗವಾಗಿರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ.

ಪ್ರಾಚೀನ ದಕ್ಷಿಣ ಭಾರತದಲ್ಲಿನ ರಾಜಪ್ರಭುತ್ವದ ಪರಿಸ್ಥಿತಿಗಳನ್ನು ತಮಿಳಿನ ಶಾಸ್ತ್ರೀಯ ಸಾಹಿತ್ಯವಾದ ಸಂಗಮ್ ಸಾಹಿತ್ಯ ಎಂಬ ಗ್ರಂಥಗಳಲ್ಲಿ ಸೆರೆಹಿಡಿಯಲ್ಪಟ್ಟಿರುವುದು ನಮ್ಮ ಅದೃಷ್ಟವೇ ಸರಿ. ಸಂಗಮ್ ಸಾಹಿತ್ಯವನ್ನು ಒಳಗೊಂಡಿರುವ ಗ್ರಂಥಗಳು ಮತ್ತು ಮಹಾಕಾವ್ಯಗಳು ತಮಿಳು ದೇಶದ ರಾಜರು ಮತ್ತು ಮುಖ್ಯಸ್ಥರಿಂದ ಪೋಷಿತವಾದ ಆಸ್ಥಾನ ಕಾವ್ಯಗಳನ್ನು ಒಳಗೊಂಡಿರುತ್ತವೆ. ಇವುಗಳನ್ನು ಸಾಮಾನ್ಯ ಯುಗದ ಮೊದಲ ಕೆಲವು ಶತಮಾನಗಳಲ್ಲಿ ಸಂಗಮ ಸಾಹಿತ್ಯವನ್ನು ಬರೆದವರಲ್ಲಿ ಒಬ್ಬರು ಅಥವಾ ಮಧುರೈನ ಪಾಂಡ್ಯ ರಾಜನ ಆಸ್ಥಾನ ಅಭಿಜ್ಞರ ಸಮೂಹದಿಂದ ಆಯ್ಕೆಮಾಡಿ, ಜೋಡಿಸಲಾಗಿದೆ. ಇದು ಮೂಲಭೂತವಾಗಿ ವೀರರ ಸಾಹಿತ್ಯವಾಗಿದ್ದು, ಅದರ ವಸ್ತುವಿಷಯವು ರಾಜರು ಮತ್ತು ಯೋಧ ವರ್ಗವು ಕೈಗೊಳ್ಳುತ್ತಿದ್ದ ಕೆಲಸಗಳು ಮತ್ತು ಅವರ ಪ್ರೀತಿಯನ್ನು ಒಳಗೊಂಡಿದೆ. ಇದು ದಕ್ಷಿಣ ಭಾರತದ ಆರಂಭದಲ್ಲಿ ಆದರ್ಶಪ್ರಾಯವಾಗಿದ್ದ ಯುದ್ಧದ ಆನೆ ಮತ್ತು ಚತುರಂಗ ಸೈನ್ಯದ ಉಪಸ್ಥಿತಿಯ ಕುರಿತಾದ ಶ್ರೀಮಂತ ಸಾಕ್ಷ್ಯವನ್ನು ನೀಡುತ್ತದೆ.

ಈ ಕಾವ್ಯ ಸಾಹಿತ್ಯದ ಪ್ರಪಂಚವು ನಮ್ಮ ವಸ್ತುವಿಷಯಕ್ಕೆ ವಿಶೇಷ ಮೌಲ್ಯವನ್ನು ಏಕೆ ನೀಡುತ್ತದೆಂದರೆ, ಅದು ಭೂಮಿಯನ್ನು ಐದು ಪರಿಸರ ವಲಯಗಳು ಅಥವಾ ಭೂಪ್ರದೇಶಗಳಾಗಿ ವಿಂಗಡಿಸಿರುವುದನ್ನು ಆಧರಿಸಿದೆ. ಸಾಹಿತ್ಯದ ವ್ಯಾಕರಣ ಮತ್ತು ಕಾವ್ಯಶಾಸ್ತ್ರದ ಕುರಿತಾದ ಗ್ರಂಥವಾದ *ಟೋಲ್ಕಾಪ್ಪಿಯಂ*ನ ಕಾವ್ಯಶಾಸ್ತ್ರದಲ್ಲಿ ಇದನ್ನು ರೂಪಿಸಲಾಗಿದೆ. ಐದು ಭೂಪ್ರದೇಶಗಳ ಪೈಕಿ ಪ್ರತಿಯೊಂದೂ, ವಿಶಿಷ್ಟ ಭೌತಿಕ ಲಕ್ಷಣಗಳು, ಸಸ್ಯ ಮತ್ತು ಪ್ರಾಣಿಗಳು ಮತ್ತು ಮಾನವ ಸಾಮಾಜಿಕ-ಆರ್ಥಿಕ ವ್ಯವಸ್ಥೆಯ ಸ್ವರೂಪವನ್ನು ಹೊಂದಿದೆ. ರೂಢಿಯಲ್ಲಿ, ಈ ಐದು ಭೂದೃಶ್ಯಗಳನ್ನು ಅವುಗಳ ಸಾಂಕೇತಿಕ ಹೂವು ಅಥವಾ ಮರದಿಂದ ಹೆಸರಿಸಲಾಗಿದೆ:

ಕುರಿಂಜಿ (ಒಂದು ಕೆಂಪು ಹೂವು), ಪರ್ವತಗಳು

ಮುಲ್ಲಾಯ್ (ಮಲ್ಲಿಗೆ), ಹುಲ್ಲುಗಾವಲು

ಮರುತಮ್ (ಕೆಂಪು ಹೂಗಳನ್ನು ಹೊಂದಿರುವ ಮರ), ಹಳ್ಳಿಗಾಡು

ನೆಯ್ತಲ್ (ಜಲಚರ ಹೂವು), ಸಮುದ್ರತೀರ

ಪಾಲೈ (ಒಂದು ನಿತ್ಯಹರಿದ್ವರ್ಣಿ), ಬಂಜರುಭೂಮಿ, ಮರಳುಗಾಡು

ಹೀಗಾಗಿ ಪರ್ವತಗಳು ಕುರಿಂಚಿ ಹೂವು, ಕಾಡಾನೆಗಳು, ಮಂಗಗಳು, ಗಿಳಿಗಳು ಮತ್ತು ರಾಗಿ ಬೇಸಾಯ ಮಾಡುವ ಬುಡಕಟ್ಟು ಜನರ ನೆಲೆಯಾಗಿದೆ. ಮುಲ್ಲೈ ಎಂದರೆ ಪಶುಪಾಲಕರು ತಮ್ಮ ಜಾನುವಾರುಗಳನ್ನು ಮೇಯಿಸುವ ತಾಣವಾಗಿದೆ; ಮರುತಮ್ ಕೃಷಿ ಮಾಡುವ ಗ್ರಾಮಗಳು ಮತ್ತು ಆರ್ದ್ರ ಅಕ್ಕಿ ಕೃಷಿ ಮಾಡುವ ಸ್ಥಳವಾದರೆ, ನೆಯ್ತಲ್ ಬೆಸ್ತರ ಜಾಗವಾಗಿದೆ; ಮತ್ತು ಪಾಲೈ, ವರ್ತಕ ಗುಂಪುಗಳನ್ನು ಬೇಟೆಯಾಡುವ ಡಕಾಯಿತರ ಅಡ್ಡವಾಗಿದೆ. ಈ ಕೊನೆಯದನ್ನು ಒಂದು ಸ್ಥಳ ಎನ್ನುವ ಬದಲು ವರ್ಷದ ಒಂದು ಸಮಯ ಎನ್ನಬಹುದು: ಏರುತ್ತಿರುವ ಶಾಖವು ಎಲ್ಲವನ್ನೂ ಒಣಗಿಸುವ ಮತ್ತು ಮಾನ್ಸೂನ್ ಕಾಡಿನ ಪತನಶೀಲ ಮರಗಳ ಬಹುತೇಕ ಎಲೆಗಳು ಉದುರುವ ಬೇಸಿಗೆ ಕಾಲ.

ಅಲೆಮಾರಿ ಪಶುಪಾಲಕರು ಮತ್ತು ಅವರ ಧರ್ಮಗಳ ವಿದ್ವಾಂಸರಾದ ಗುಂಥರ್-ಡೀಟ್ಜ್ ಸೊಂಟೈಮರ್, ಕಳೆದ ಅಥವಾ ಎರಡು ಶತಮಾನಗಳ ಹಿಂದೆ ಆದ ದೊಡ್ಡಮಟ್ಟದ ಅರಣ್ಯನಾಶಕ್ಕೂ ಮೊದಲು, ವಿಭಿನ್ನ ಆರ್ಥಿಕ ಗುಂಪುಗಳು ಹೆಚ್ಚು ಪ್ರತ್ಯೇಕವಾಗಿದ್ದವು ಮತ್ತು ಅವುಗಳ ಕಾರ್ಯಕ್ಷೇತ್ರಗಳ ಒತ್ತುವರಿ ಹಾಗೂ ಅತಿಕ್ರಮಣಗಳು ಅಷ್ಟಾಗಿ ಕಂಡುಬರುತ್ತಿರಲಿಲ್ಲ ಎಂಬುದನ್ನು ಗಮನಿಸಿದನು. ಸಂಗಮ್ ಸಾಹಿತ್ಯದ ಐದು ಭೂಪ್ರದೇಶಗಳು ದಕ್ಷಿಣ ಭಾರತ ಮತ್ತು ಡೆಕ್ಕನ್‌ನ ಪರಿಸರ ವಲಯಗಳು ಮತ್ತು ಆರ್ಥಿಕ ಮಾದರಿಗಳನ್ನು ಅತ್ಯಂತ ಉತ್ತಮವಾಗಿ ವಿವರಿಸುತ್ತವೆ ಎಂದು ಅವನು ನಂಬಿದ್ದನು. ಈ ಪ್ರತಿಯೊಂದು ಪ್ರದೇಶವೂ ತನ್ನದೇ ಆದ ಜಾನಪದ ಧರ್ಮವನ್ನು, ವಿಶಿಷ್ಟವಾದ ಬುಡಕಟ್ಟು ದೇವರುಗಳನ್ನು ನಿರ್ಮಿಸಿ, ಅಂತಿಮವಾಗಿ ಸಂಸ್ಕೃತ ಪಠ್ಯಗಳಲ್ಲಿ ಉನ್ನತ ಹಿಂದೂ ಧರ್ಮದ ದೇವರುಗಳೊಂದಿಗೆ ಗುರುತಿಸಲ್ಪಟ್ಟವು.

ಈ ಐದು ಭೂಪ್ರದೇಶಗಳು ಪಾರಂಪರಿಕವಾಗಿ ವಿಭಿನ್ನ ಕಾವ್ಯಾತ್ಮಕ ಸನ್ನಿವೇಶಗಳೊಂದಿಗೆ ಸಂಬಂಧ ಹೊಂದಿದ್ದು, ಇದನ್ನು *ತಿನೈ* ಎಂದು ಕರೆಯಲಾಗುತ್ತದೆ. ಕಾವ್ಯದ ಪ್ರಕಾರಗಳು ಎರಡು, *ಅಕಮ್* ಮತ್ತು *ಪುರಂ*. ಅವು ಪ್ರೀತಿಯ ಆಂತರಿಕ ಜಗತ್ತು ಹಾಗೂ ಯುದ್ಧ ಮತ್ತು ರಾಜತ್ವದ ಬಾಹ್ಯದ ಸಾರ್ವಜನಿಕ ಜಗತ್ತನ್ನೂ, ಜೊತೆಗೆ ಕವಿಗಳಿಗೆ ದೊರೆಯುವ ರಾಜೋಪಚಾರವನ್ನೂ ಸೂಚಿಸುತ್ತದೆ. ಪ್ರೇಮ ಕಾವ್ಯದ ಕಾವ್ಯಾತ್ಮಕ ಸನ್ನಿವೇಶಗಳೆಂದರೆ

ಪ್ರೇಮಿಗಳ ಭೇಟಿಗಳು, ರಹಸ್ಯ ಪ್ರೀತಿ, ದೇಶೀಯ ಪ್ರೀತಿ, ವಿರಹ ಪ್ರೀತಿ ಮತ್ತು ಪ್ರೇಮಿಯೊಂದಿಗೆ ಪಲಾಯನ. ಈ ಪ್ರತಿಯೊಂದೂ ಪಾರಂಪರಿಕವಾಗಿ ಒಂದಿಲ್ಲೊಂದು ಭೂಪ್ರದೇಶಕ್ಕೆ ಸಂಬಂಧಿಸಿದೆ. ಆದ್ದರಿಂದ ಪರ್ವತ ಪ್ರದೇಶವಾದ ಕುರಿಂಚಿ, ಪ್ರೇಮಿಗಳ, ವಿಶೇಷವಾಗಿ ಮೊದಲ ಪ್ರೀತಿಯ ಭೇಟಿಗಳಿಗೆ ವೇದಿಕೆಯಾಗಿದೆ; ಕೆಂಪು ಕುರಿಂಚಿ ಹೂವು ಹೆಣ್ಣುಮಗಳೊಬ್ಬಳು ಲೈಂಗಿಕವಾಗಿ ಪ್ರಬುದ್ಧಳಾಗುವ ವಯಸ್ಸನ್ನು ಸೂಚಿಸುವ ಹನ್ನೆರಡು ವರ್ಷಗಳ ನಂತರ ಅರಳುತ್ತದೆ. ಒಂದು ಪ್ರೇಮ ಕಾವ್ಯವು ಕೇಳುಗನಿಗೆ ತನ್ನ ವಸ್ತುವಿಷಯವು ಮೊದಲ ಪ್ರೀತಿ ಅಥವಾ ಪ್ರೇಮಿಗಳ ಭೇಟಿ ಎಂದು ಸೂಚಿಸಲು ಕಾಡು ಆನೆ ಅಥವಾ ಕುರಿಂಚಿ ಪ್ರದೇಶಕ್ಕೆ ಒಗ್ಗಿಕೊಂಡ ಇನ್ನಾವುದೋ ವಿಶಿಷ್ಟವಾದದ್ದನ್ನು ಮಾತ್ರ ಉಲ್ಲೇಖಿಸುತ್ತದೆ. ಈ ರೀತಿಯಾಗಿ, ಎ.ಕೆ. ರಾಮಾನುಜನ್ ಹೇಳಿದಂತೆ, "ಆಂತರಿಕ ಭೂಪ್ರದೇಶ"ದ ವಿಷಯಗಳು ಆಂತರಿಕ ಸ್ಥಿತಿಗಳನ್ನು ಸೂಚಿಸುವ ಬಾಹ್ಯ ಚಿಹ್ನೆಗಳಾಗಿ ಕಾರ್ಯನಿರ್ವಹಿಸುತ್ತವೆ.

ನಾವು ನಿರೀಕ್ಷಿಸಬಹುದಾದಂತೆ, ಕಾಡಾನೆಗಳನ್ನು *ಕುರಿಂಚಿ*ಯ *ಅಕಂ* ಕವಿತೆಗಳಲ್ಲಿ ಹೆಚ್ಚಾಗಿ ಉಲ್ಲೇಖಿಸಲಾಗಿದೆ. ಏಕೆಂದರೆ ಅವು ಆ ಪರ್ವತದ ಅರಣ್ಯ ಭೂಪ್ರದೇಶದ ಪ್ರತಿನಿಧಿಗಳಾಗಿವೆಯೇ ಹೊರತು ಬೇರೆಯದಕ್ಕೆ ಅಲ್ಲ. ಅವುಗಳನ್ನು ಆಗಾಗ್ಗೆ ಉಲ್ಲೇಖಿಸಲಾಗುತ್ತದೆ. ಈ ಪ್ರದೇಶದ ಜನರು ಬೇಟೆಗಾರರು ಮತ್ತು ಧಾನ್ಯಗಳನ್ನು ಸಹ ಬೆಳೆಯುತ್ತಾರೆ. ಆನೆಗಳು ಅವರ ಹೊಲಗಳ ಮೇಲೆ ದಾಳಿ ಮಾಡಿ, ಹೆಚ್ಚಿನ ಹಾನಿಯನ್ನುಂಟುಮಾಡುತ್ತವೆ. ಈ ರೀತಿಯ ಪ್ರಯೋಗದ ಕಾವ್ಯಗಳಲ್ಲಿ, ರಾಜ್ಯದ ಯುವಕನೊಬ್ಬನು ತಾನು ಕಾಡು ಆನೆಯನ್ನು ಬೇಟೆಯಾಡುತ್ತಿದ್ದೇನೆ ಎಂಬ ನೆಪವನ್ನು ಒಡ್ಡಿ ತಾನು ಆಕರ್ಷಿತನಾದ ಯುವತಿಯೊಬ್ಬಳೊಂದಿಗೆ ಸಂಭಾಷಣೆಯನ್ನು ಆರಂಭಿಸಿ, ಅವಳು ಗಾಯಾಳು ಆನೆಯೊಂದು ಹಾದುಹೋದದನ್ನು ನೋಡಿದಳೇ ಎಂದು ಕೇಳುತ್ತಾನೆ. ನಂತರ, ಆನೆಗಳನ್ನು ಬೇಟೆಯಾಡಲಾಗುತ್ತದೆ ಮತ್ತು ಹೆಚ್ಚು ಕಡಿಮೆ ಸಂಸ್ಕೃತ ಪಠ್ಯಗಳಲ್ಲಿ ನಮೂದಿಸಿರುವ ಕಾಡುಜನರಿಗೆ (*ಅಟವಿಗಳು*) ಸಮಾನರಾದ *ಕುರಿಂಚಿ*ಯ ಬುಡಕಟ್ಟು ಜನರು ತಮಗೆ ಸಾಧ್ಯವಾದಾಗ ಆನೆಗಳನ್ನು ಕೊಂದು ತಿನ್ನುತ್ತಾರೆ ಮತ್ತು ಅವುಗಳ ದಂತಗಳನ್ನು ಮಾರಾಟ ಮಾಡುತ್ತಾರೆ. ಇಲ್ಲಿ ಕಾಡು ಆನೆಗಳಿಗೆ ಯಾವುದೇ ರೀತಿಯ ರಾಜ ರಕ್ಷಣೆ ಇರುವಂತೆ ತೋರುವುದಿಲ್ಲವಾದರೂ ನಾವು ಈ ಜನರನ್ನು ದೂರದಿಂದ, ವಿಚಿತ್ರವಾದ ಜನರಂತೆ, ಕಾವ್ಯಾತ್ಮಕ ದೃಷ್ಟಿಯಿಂದ ನೋಡುತ್ತಿದ್ದೇವಾದ್ದರಿಂದ ಇದನ್ನು ನಾವು ಅವಲಂಬಿಸಲಾಗುವುದಿಲ್ಲ.

ಕಾಡಾನೆಗಳು *ಅಕಂ* ಅಥವಾ ಪ್ರೀತಿಯ ಕಾವ್ಯದಲ್ಲಿ ಕಾಣಿಸಿಕೊಂಡರೆ, ಪಳಗಿದ ಆನೆಗಳು ಹೆಚ್ಚಾಗಿ *ಪುರಂ*ನ ಕವಿತೆಗಳಲ್ಲಿ ಅಥವಾ ರಾಜರು ಮತ್ತು ಮುಖ್ಯಸ್ಥರ ವೀರೋಚಿತ

ಕೆಲಸಗಳಲ್ಲಿ ಕಾಣಿಸಿಕೊಳ್ಳುತ್ತವೆ. ಈ ವೀರ ಕಾವ್ಯವು ಹೆಚ್ಚು ಕಡಿಮೆ *ಅಕಂ*ಗೆ ಅನುಗುಣವಾಗಿ ತನ್ನ ಸನ್ನಿವೇಶಗಳು ಅಥವಾ ವಸ್ತುವಿಷಯಗಳನ್ನು, ಅಂದರೆ, ಜಾನುವಾರು ಕಳ್ಳತನ, ಮುನ್ನಡೆಯುವಿಕೆ, ಮುತ್ತಿಗೆ, ಯುದ್ಧ, ಗೆಲುವು – ತನ್ನದೇ ಆದ ಲಾಂಛನದ ಹೂವುಗಳು ಅಥವಾ ಸಸ್ಯಗಳನ್ನು ಒಳಗೊಂಡಿರುತ್ತದೆ. ಚತುರಂಗ ಸೈನ್ಯದ ಅಂಶಗಳಿಗೆ ಇಲ್ಲಿ ಸಂಪೂರ್ಣ ಸಾಕ್ಷ್ಯಗಳು ಸಿಗುತ್ತವೆ. *ಪುರಂ* ಕಾವ್ಯಗಳ ಸಂಕಲನಗಳಲ್ಲೊಂದಾದ *ಪುರಣಾನೂರು* ಕವನದಲ್ಲಿ, ಪೆರೆಯಿನ್ ಮುರುವಳಾರ್‌ನ ಓರ್ವ ನಂಬಿ ನೆಟ್ಟುಂಚೆಳಿಯನಿಗೆ ಹಾಡಿದ ಶೋಕಗೀತೆಯು, ರಾಜನು ಎಲ್ಲಾ ನಾಲ್ಕು ರೂಪದ ಯುದ್ಧಗಳಲ್ಲಿ ನುರಿತವನಾಗಿದ್ದನು ಎಂಬುದನ್ನು ಸೂಚಿಸುತ್ತದೆ.

ಅವನು ಮುಂಬರುತ್ತಿದ್ದ ಸೈನ್ಯವನ್ನು ಎದುರಿಸಿದನು,
ಹೆದರಿ ಓಡಿಹೋಗುವವರ ಬೆನ್ನಟ್ಟಿದನು,
ಆಲೋಚನೆ ಮಾಡುವುದಕ್ಕಿಂತ ವೇಗವಾಗಿ ತನ್ನ ಕುದುರೆಗಳನ್ನು ಓಡಿಸಿದನು,
ಉದ್ದವಾದ ನಗರದ ಬೀದಿಗಳಲ್ಲಿ ರಥಗಳನ್ನು ಓಡಿಸಿದನು,
ಎತ್ತರದ ಮತ್ತು ಅಸಾಮಾನ್ಯ ಆನೆಗಳನ್ನು ಸವಾರಿ ಮಾಡಿದನು.

ಯುದ್ಧಭೂಮಿಯ ಅಥವಾ ಯುದ್ಧದ ನಂತರ ಅದರಲ್ಲಿ ಸತ್ತವರ ವಿವರಣೆಗಳು, ಸಾಮಾನ್ಯವಾಗಿ ಸೈನ್ಯದ ನಾಲ್ಕು "ಕಾಲುಗಳನ್ನು" ಸೂಚಿಸುತ್ತವೆ. ದಕ್ಷಿಣ ಭಾರತದಲ್ಲಿ ಕುದುರೆಗಳಿಗಿಂತ ಆನೆಗಳು ಹೆಚ್ಚು ಹೇರಳವಾಗಿದ್ದು, ಕುದುರೆಗಳನ್ನು ದೂರದಿಂದ ಆಮದು ಮಾಡಿಕೊಳ್ಳಬೇಕಾಗಿತ್ತು; ಅದೇನೇ ಇದ್ದರೂ, ನೇರವಾಗಿ ಅಥವಾ ಸಂಕ್ಷಿಪ್ತವಾಗಿ, ರಥಗಳು ಮತ್ತು ಅಶ್ವಸೈನ್ಯವನ್ನು ನಿಯಮಿತವಾಗಿ, ಕಾಲಾಳುಗಳು (ಬಹುತೇಕವಾಗಿ ಈಟಿ ಹಿಡಿದವರು) ಮತ್ತು ಆನೆಗಳೊಂದಿಗೆ ಸೂಚಿಸಲಾಗುತ್ತದೆ. ಯುದ್ಧ ಮತ್ತು ಶಾಂತಿಯ ಸಮಯಗಳಲ್ಲಿ, ರಾಜರು ಬಹುತೇಕ ಆನೆಗಳ ಮೇಲೆ ಸವಾರಿ ಮಾಡುತ್ತಾರೆ.

ಸಂಗಂ ಸಾಹಿತ್ಯದಲ್ಲಿ ಕಾಡಾನೆಗಳು ಮತ್ತು ಪಳಗಿದ ಯುದ್ಧದ ಆನೆಗಳ ವಿತರಣೆಯಲ್ಲಿ ಒಂದು ನಿರ್ದಿಷ್ಟವಾದ ಮಾದರಿ ಇದೆ. ಕಾಡಾನೆಗಳು *ಕುರಿಂಚಿ*ಯ ಪರ್ವತ ಭೂಪ್ರದೇಶದ ಕಾಡು ಜನರ ಮಧ್ಯೆ ಮಾತ್ರ ಕಂಡುಬರುತ್ತವೆ. ಈ ಜನರು ತಮ್ಮ ಬೆಳೆಗಳಿಗೆ ಸಂಬಂಧಿಸಿದಂತೆ ಆನೆಗಳೊಂದಿಗೆ ಘರ್ಷಣೆ ಮಾಡುತ್ತಾರೆ, ಅವರು ಆನೆಯ ಮಾಂಸವನ್ನು ಬೇಯಿಸಿ ತಿನ್ನುತ್ತಾರೆ ಮತ್ತು ದಂತವನ್ನು ತೆಗೆದುಕೊಳ್ಳುತ್ತಾರೆ. ಆದರೆ ಅವರು ತಮ್ಮ ಸ್ವಂತ ಬಳಕೆಗಾಗಿ ಆನೆಗಳನ್ನು ಹಿಡಿದು ತರಬೇತಿ ನೀಡುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ತರಬೇತಿ ಪಡೆದ ಯುದ್ಧದ ಆನೆಗಳು ರಾಜರೊಂದಿಗೆ ಬಲವಾದ ಸಂಬಂಧ ಹೊಂದಿವೆ - ಅವರು ಪ್ರಾಣಿಗಳನ್ನು ಹಿಡಿಯಲು ಮತ್ತು ತರಬೇತಿ ನೀಡಲು ಕಾಡು ಜನರನ್ನು ಬಳಸುತ್ತಾರೆ. ಇದು ಉತ್ತರದ ಮಾದರಿಯಲ್ಲಿಯೇ ಇದೆ,

ಅಲ್ಲಿ ರಾಜನಿಗೆ ಆನೆಗಳ ಅವಶ್ಯಕತೆಯಿದೆ ಎಂದರೆ ಅವನು ಕಾಡು ಜನರ ಸಹಕಾರವನ್ನು ಪಡೆಯಬೇಕು. ಸಂಗಂ ಕಾವ್ಯದಲ್ಲಿ ಕಂದಕದ ವಿಧಾನದ ಕೆಲವು ಉಲ್ಲೇಖಗಳನ್ನು ಬಿಟ್ಟರೆ, ಆನೆಗಳನ್ನು ಹೇಗೆ ಸೆರೆಹಿಡಿಯಲಾಯಿತು ಎಂಬುದರ ಕುರಿತು ನಮಗೆ ಮತ್ತಾವ ಮಾಹಿತಿಯೂ ದೊರೆಯುವುದಿಲ್ಲ.

ಪುರಂ ಕಾವ್ಯಗಳ ಯುದ್ಧಭೂಮಿಯ ಸನ್ನಿವೇಶಗಳಲ್ಲದೆ, ಕವಿಗಳಿಗೆ ಉಡುಗೊರೆಗಳನ್ನು ಉದಾರವಾಗಿ ಒದಗಿಸಿದ್ದಕ್ಕಾಗಿ ರಾಜನನ್ನು ಶ್ಲಾಘಿಸುವ *ಪಾಡಾನ್* ಅಥವಾ ಹೊಗಳಿಕೆಯ ಪ್ರಕಾರದಲ್ಲಿಯೂ ಗಣನೀಯ ಸಂಖ್ಯೆಯ ಕಾವ್ಯಗಳಿವೆ. ಚಾರಣರು ಕವಲುದಾರಿಗಳಲ್ಲಿ ಭೇಟಿಯಾದಾಗ ಅವರು ಆಗಷ್ಟೇ ಆನಂದಿಸಿದ ರಾಜರ ಆತಿಥ್ಯದ ಬಗ್ಗೆ ಚರ್ಚಿಸುತ್ತಾರೆ. ಒಂದು ವಿಶೇಷವಾದ ಉತ್ತಮ ಉದಾಹರಣೆಯ ಪ್ರಕಾರ, ಕಚ್ಚಾ ಮಣ್ಣನ್ನು ಹೂಳುವಾಗ ನೇಗಿಲುಗಳು ಮೊಂಡಾಗುವಂತೆ ತನ್ನ ಹಲ್ಲುಗಳು ಸವೆಯುವ ತನಕ ರಾಜನು ತಿನ್ನಲು ಕೊಟ್ಟನು ಎಂದು ಕವಿಯು ಹೇಳುತ್ತಾರೆ. ಉಡುಗೊರೆ ನೀಡುವುದು ಯುದ್ಧ ಮಾಡುವಿಕೆಯ ಇನ್ನೊಂದು ಬದಿಯಾಗಿದೆ; ಯುದ್ಧವು ಸಂಪತ್ತನ್ನು ಸಂಗ್ರಹಿಸುತ್ತದೆ, ಅದನ್ನು ನಂತರ ಇತರರಿಗೆ ಕೊಟ್ಟುಬಿಡಲಾಗುತ್ತದೆ. ಆದ್ದರಿಂದ ಸಂಸ್ಕೃತ ಮಹಾಕಾವ್ಯಗಳಲ್ಲಿರುವಂತೆ ರಾಜತ್ವದ ಬಗೆಗಿನ ತಮಿಳು ಕಾವ್ಯವು ನಾಣ್ಯದ ಎರಡೂ ಬದಿಗಳನ್ನು ಪ್ರದರ್ಶಿಸುತ್ತದೆ. ಕೆಲವು ರಾಜರು ತಮ್ಮ ಉದಾರತೆಗೆ ವಿಶೇಷವಾಗಿ ಪ್ರಸಿದ್ಧರಾಗಿದ್ದು, ಕವಿ ಕಾವ್ಯದ ವಸ್ತುವಿಷಯವಾಗುತ್ತಾರೆ. ಕವಿಗಳು ರಾಜನ ಈ ಔದಾರ್ಯವನ್ನು ಸೂಚಿಸಲು ಚತುರ ಅತಿಶಯೋಕ್ತಿಗಳನ್ನು ಬಳಸಿ ಅವರ ಸಾಮರ್ಥ್ಯವನ್ನು ಪ್ರದರ್ಶಿಸುವಾಗ ಗಮನಾರ್ಹ ದೃಶ್ಯ ಚಿತ್ರಗಳನ್ನು ಬಳಸುತ್ತಾರೆ. ಅಯ್ ಅಂಠಿರನ್ ಅಂತಹ ಒಬ್ಬ ರಾಜನಾಗಿದ್ದನು. ಮುತಮೊಸಿಯಾರ್ ಅವರ ಒಂದು ಕಾವ್ಯದಲ್ಲಿ, ಚಾರಣರು ಅರಮನೆಯಲ್ಲಿ ಸಂತೃಪ್ತಿಯಿಂದಿದ್ದು ಹೊರಟ ನಂತರ, ರಾಜನ ಉದಾರತೆಯಿಂದಾಗಿ ಅರಮನೆಯು ಹೇಗೆ ಬರಿದಾಗಿದೆ ಎಂದು ವಿವರಿಸುವ ಮೂಲಕ ಆತನ ಅಪಾರ ಉದಾರಶೀಲತೆಯನ್ನು ಸೂಚಿಸಲಾಗಿದೆ; ಆನೆ ಕಂಬಗಳು ಆನೆಗಳಿಲ್ಲದೆ ಇವೆ, ಕಾಡು ನವಿಲುಗಳು ಮಾತ್ರ ಅಡ್ಡಾಡುತ್ತಿವೆ; ಅರಮನೆಯ ಮಹಿಳೆಯರ ಬಳಿ ತಾವು ಎಂದಿಗೂ ಯಾರಿಗೂ ಕೊಡಲಾಗದ ಮದುವೆಯ ಆಭರಣಗಳನ್ನು ಹೊರತುಪಡಿಸಿ ಮತ್ಯಾವ ಆಭರಣಗಳೂ ಇಲ್ಲ; ಅರಮನೆಯಲ್ಲಿ ಮಂದ ಬೆಳಕಿದ್ದು, ಈಗ ದೀಪಗಳಿಗೆ ಹಾಕಲು ಸ್ವಲ್ಪ ಮಾತ್ರ ಎಣ್ಣೆ ಉಳಿದಿದೆ; ಇಷ್ಟಾದರೂ ಇತರ ರಾಜರ ಶ್ರೀಮಂತ ಅರಮನೆಗಳು ಅಯ್ ಅವರ ಈ ಖಾಲಿ ಅರಮನೆಯೊಂದಿಗೆ ಯಾವ ಹೋಲಿಕೆಯೂ ಅಲ್ಲ.

ಈ ಕಾವ್ಯಗಳು ದಾನಸ್ತುತಿಗಳಿಗೆ ಅಂದರೆ, ರಾಜರು ಕವಿಗಳಿಗೆ ನೀಡಿದ ಉಡುಗೊರೆಗಳನ್ನು ಕುರಿತ ಋಗ್ವೇದದಲ್ಲಿನ ಹೊಗಳಿಕೆಗಳಿಗೆ ಹೋಲುತ್ತವೆ. ಆದರೆ ನಾವು ನೋಡಿದಂತೆ,

ಋಗ್ವೇದದ ಕಾವ್ಯಗಳು ಚಿನ್ನದ ಉಡುಗೊರೆಗಳು, ಆಳುಗಳು, ರಾಸುಗಳು, ಕುದುರೆಗಳು ಮತ್ತು ರಥಗಳನ್ನು ಒಳಗೊಳ್ಳುತ್ತವೆಯಾದರೂ, ಆನೆಗಳನ್ನು ಅಲ್ಲ. ಯುದ್ಧದ ಆನೆಯ ಆವಿಷ್ಕಾರದ ನಂತರದ ವೈದಿಕ ಪಠ್ಯಗಳು, ಮಹಾಭಾರತ ಮತ್ತು ರಾಮಾಯಣಗಳಲ್ಲಿ ಮಾತ್ರ ಆನೆಯು ಅತ್ಯುನ್ನತ ರಾಜ ಉಡುಗೊರೆಯಾಗಿದೆ. ಸಂಗಮ್ ಸಾಹಿತ್ಯದ ಪುರಂ ಕವಿತೆಗಳಲ್ಲಿ ಅವು ಈಗಾಗಲೇ ಇವೆ. ಅದರಲ್ಲಿ ರಾಜನು ಕವಿಗೆ ತನ್ನ ಹರಿದ ಬಟ್ಟೆಗಳನ್ನು ಬದಲಿಸಲು ಅದ್ದೂರಿಯಾದ, ಬೆಲೆಬಾಳುವ ಹೊಸ ಬಟ್ಟೆಗಳನ್ನು, ಜೊತೆಗೆ ಆಹಾರ ಮತ್ತು ಪಾನೀಯವನ್ನು ನೀಡುತ್ತಾನೆ ಮತ್ತು ಹೊರಡುವಾಗ ಚಿನ್ನದ ಉಡುಗೊರೆಗಳು, ಅಥವಾ ರಥ, ಅಥವಾ ಆನೆಯೊಂದಿಗೆ ಕಳುಹಿಸುತ್ತಾನೆ.

ಯುದ್ಧದ ಆನೆಯ ವ್ಯವಸ್ಥೆ ಮತ್ತು ಚತುರಂಗ ಸೈನ್ಯದ ಪರಿಕಲ್ಪನೆಯು ದಕ್ಷಿಣ ಭಾರತದಲ್ಲಿ ಹೇಗೆ ಬೇರೂರಿತು? ನಿಶ್ಚಿತವಾಗಿ ಈ ವಿಚಾರಗಳು ಹೇಗೆ ಪ್ರಚಾರವಾದವು ಮತ್ತು ಅವುಗಳನ್ನು ಆಚರಣೆಗೆ ತಂದ ತಂತ್ರಗಳು ಯಾವುವು ಎಂಬುದು ನಮಗೆ ತಿಳಿದಿಲ್ಲ. ಆದರೆ ಅಲ್ಲಿ ಮೌರ್ಯ ಸಾಮ್ರಾಜ್ಯದ ವಿಸ್ತರಣೆಯ ಮೂಲಕ ಅವು ದಕ್ಷಿಣದ ರಾಜರಿಗೆ ಲಭ್ಯವಾಗಿರಬಹುದು. ಮೌರ್ಯ ರಾಜ ಅಶೋಕನ ಶಾಸನಗಳು ದಕ್ಷಿಣದಲ್ಲಿ ಕಂಡುಬರುತ್ತವೆ ಮತ್ತು ಸಂಗಮ್ ಕಾವ್ಯಗಳು ತಮಿಳು ದೇಶದ ಮೂರು ಕಿರೀಟಧಾರಿ ರಾಜರು ಎಂದು ಕರೆಯುವ ಚೋಲ, ಪಾಂಡೀಯ ಮತ್ತು ಚೇರ ರಾಜರ ಪೂರ್ವಜರೊಂದಿಗೆ ಅವನು ರಾಜತಾಂತ್ರಿಕ ಸಂಬಂಧವನ್ನು ಹೊಂದಿದ್ದನೆಂದು ಸೂಚಿಸುತ್ತವೆ. ಅಶೋಕನು ಇವರನ್ನು ಹೆಸರಿನಿಂದ ಉಲ್ಲೇಖಿಸುತ್ತಾನೆ (ಚೇರರನ್ನು ಕೇರಳಪುತ್ರ ಎಂದು). ಇತರ ಅನೇಕ ಸಣ್ಣ ರಾಜರ ನಡುವೆ ಇವರುಗಳೇ ಪ್ರಮುಖ ರಾಜರುಗಳಾಗಿದ್ದರು. ಮೇಲಾಗಿ, ಸಂಗಮ್ ಕಾವ್ಯವು ಒಂದು ವಿಶಿಷ್ಟವಾದ ಸೃಜನೆಯಾಗಿದ್ದು ದಕ್ಷಿಣ ಭಾರತವು ಅದರ ತವರಾಗಿದ್ದರೂ, ಅದು ತನ್ನ ಕಲ್ಪನೆಯಲ್ಲಿ ಉತ್ತರವನ್ನು ಒಳಗೊಂಡ ವಿಶಾಲವಾದ ವ್ಯಾಪ್ತಿಯನ್ನು ತೋರಿಸುತ್ತದೆ. ಹೀಗಾಗಿ, ಈ ಕಾವ್ಯಗಳಲ್ಲಿನ ಒಬ್ಬ ರಾಜನು ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ - ಭಾರತದ ದಕ್ಷಿಣ ತುದಿಯಲ್ಲಿರುವ ಕೇಪ್ ಕೊಮೊರಿನ್ - ಮತ್ತು ಸಮುದ್ರದಿಂದ ಸಮುದ್ರದವರೆಗೆ ಸಾಮ್ರಾಜ್ಯವನ್ನು ವಶಪಡಿಸಿಕೊಂಡಿದ್ದಾನೆ ಎಂದು ಹೇಳಲಾಗುತ್ತದೆ; ಮತ್ತೊಬ್ಬ ರಾಜನು ತನ್ನ ರಾಜವಂಶದ ಚಿಹ್ನೆಯನ್ನು ಹಿಮಾಲಯದ ಪಾರ್ಶ್ವದಲ್ಲಿ ಕೆತ್ತಿದ್ದಾನೆ; ಮೂರನೆಯವನು ಮಹಾಭಾರತ ಯುದ್ಧದ ಯೋಧರಿಗೆ ಔತಣ ನೀಡಿದ್ದಾನೆ. ಯುದ್ಧದ ಆನೆ ಮತ್ತು ಅದರ ಪಾರಿಸಾರಿಕ ರಚನೆಗಳು ಒಂದಲ್ಲ ಒಂದು ರೂಪದಲ್ಲಿ ರಾಜ-ರಾಜರ ನಡುವಿನ ಸಂವಹನದ ಮೂಲಕ ದಕ್ಷಿಣ ಭಾರತದಲ್ಲಿ ಬೇರೂರಿದೆ ಮತ್ತು ಮೌರ್ಯ ಸಾಮ್ರಾಜ್ಯವು ಅದರ ಅಳವಡಿಕೆಯನ್ನು ಪ್ರೇರೇಪಿಸಿರಬಹುದು ಎಂಬುದು ಸ್ಪಷ್ಟವಾಗಿದೆ.

ಶ್ರೀಲಂಕಾ

ಶ್ರೀಲಂಕಾದಲ್ಲಿನ ಯುದ್ಧದ ಆನೆಗಳ ಬಗೆಗಿನ ಸಾಕ್ಷಿಗಳು ದಕ್ಷಿಣ ಭಾರತದ ಕುರಿತಾಗಿ ಇರುವ ಸಾಹಿತ್ಯಕ್ಕಿಂತ ವಿಭಿನ್ನವಾದ ಸಾಹಿತ್ಯದಿಂದ ದೊರೆತಿದೆ. ನಾನು ಈಗಾಗಲೇ ಶ್ರೀಲಂಕಾ, ಮ್ಯಾನ್ಮಾರ್, ಥೈಲ್ಯಾಂಡ್ ಮತ್ತು ಕಾಂಬೋಡಿಯಾದ ಥೇರವಾಡ ಬೌದ್ಧಧರ್ಮದ ನಿಯಮವನ್ನು ಪರೋಕ್ಷವಾಗಿ ಉಲ್ಲೇಖಿಸಿದ್ದೇನೆ. ಇದನ್ನು ಸಂಸ್ಕೃತಕ್ಕೆ ಸಂಬಂಧಿಸಿದ ಉತ್ತರ ಭಾರತೀಯ ಭಾಷೆಯಾದ ಪಾಲಿ ಭಾಷೆಯಲ್ಲಿ ಬರೆಯಲಾಗಿದೆ (ಮಗಧಿ ಎಂದು ಕರೆಯಲಾಗುವ *ನೋಟಾ ಬೇನೆ* ಭಾಷೆ ಸಹ). ನಾವು ನೋಡಿದಂತೆ, ಪಾಲಿ ಭಾಷೆಯಲ್ಲಿರುವ ಅಂಗೀಕೃತ ಬೌದ್ಧ ಪಠ್ಯಗಳು ಯುದ್ಧದ ಆನೆಯನ್ನು ಬುದ್ಧನ ಸಮಯದಲ್ಲಿ ಉತ್ತರ ಭಾರತದ ಸ್ಥಾಪಿತ ವ್ಯವಸ್ಥೆಯಾಗಿ ಗ್ರಹಿಸುತ್ತವೆ. *ಮಹಾವಂಶ* (ಮಹಾ ಚರಿತ್ರೆ) ಎಂದು ಕರೆಯಲ್ಪಡುವ ಶ್ರೀಲಂಕಾದ ಚರಿತ್ರೆಯನ್ನು ಮಹಾವಿಹಾರದ (ಮಹಾ ವಿರಕ್ತಗೃಹ) ಸನ್ಯಾಸಿಗಳಿಂದ ಪಾಲಿ ಭಾಷೆಯಲ್ಲಿ ಬರೆಯಲಾಗಿದೆ. *ಮಹಾವಂಶ*ದ ಲೇಖಕರು ಸನ್ಯಾಸಿಗಳಾಗಿರುವುದರಿಂದ, ನಾವು ಅದರಿಂದ ನಿಜವಾದ ಯುದ್ಧಗಳ ನಿಕಟ ವಿವರಣೆಯನ್ನು ನಿರೀಕ್ಷಿಸಲಾಗುವುದಿಲ್ಲ. ಆದರೆ ಇದು ಮಹಾವಿಹಾರದ ದೃಷ್ಟಿಕೋನದಿಂದ ಶ್ರೀಲಂಕಾದ ರಾಜರು ಮತ್ತು ಸಿಂಹಳೀಯ ಜನರು ಮತ್ತು ಬೌದ್ಧ ಸನ್ಯಾಸಿಗಳೊಂದಿಗಿನ ಅವರ ಸಂಬಂಧದ ಬಗೆಗಿನ ದಾಖಲೆಯಾಗಿದೆ. ಹೀಗಿರುವುದರಿಂದ, *ಮಹಾವಂಶ*ವು ಸನ್ಯಾಸಿಗಳು ರಚಿಸಿದ ಕೃತಿಯೇ ಆಗಿದ್ದರೂ, ರಾಜ ಆನೆಗಳು ಮತ್ತು ಚತುರಂಗ ಸೈನ್ಯದ ಬಗ್ಗೆ ಸಾಕಷ್ಟು ವಿಷಯವನ್ನು ತಿಳಿಸುತ್ತದೆ.

ಶ್ರೀಲಂಕಾದಲ್ಲಿ ಯುದ್ಧದ ಆನೆ ಮತ್ತು ಅದಕ್ಕೆ ಸಂಬಂಧಿಸಿದ ಆಚರಣೆಯ ಸ್ವರೂಪಗಳು ಹೇಗೆ ಸ್ಥಾಪಿಸಲ್ಪಟ್ಟವು ಎಂಬುದರ ಕುರಿತು ಈ ಚರಿತ್ರೆಯು ನಮಗೆ ವಿವರಣೆಯನ್ನು ನೀಡುವುದಿಲ್ಲ: ಅವು ಆರಂಭದಿಂದಲೇ ಸ್ಪಷ್ಟವಾಗಿ ಅಥವಾ ಮೌನವಾಗಿ ಉಪಸ್ಥಿತವಾಗಿವೆ. ಆದರೆ ಭಾರತೀಯ ಮಾದರಿಯ ರಾಜತ್ವ ಮತ್ತು ಯುದ್ಧದ ಆನೆಯು ಶ್ರೀಲಂಕಾವನ್ನು ಹೇಗೆ ತಲುಪಿತು ಎಂಬುದರ ಬಗ್ಗೆ ಯಾವುದೇ ದೊಡ್ಡ ರಹಸ್ಯವಿಲ್ಲ. ಮೊದಲನೆಯದಾಗಿ, ಸಿಂಹಳ ಭಾಷೆಯು ಇಂಡೋ-ಆರ್ಯನ್ ಭಾಷೆಗಳಲ್ಲಿ ಒಂದಾಗಿದೆ (ಇಂಡೋ-ಯುರೋಪಿಯನ್ ಉಪ-ಕುಟುಂಬ), ಅಂದರೆ, ಇದು ಪಾಲಿ, ಸಂಸ್ಕೃತ ಮತ್ತು ಉತ್ತರ ಭಾರತದ ಇತರ ಭಾಷೆಗಳಿಗೆ ಸಂಬಂಧಿಸಿದೆ. *ಮಹಾವಂಶವು* ಸಿಂಹಳೀಯ ಜನರು ತಮ್ಮ ರಾಜ ವಿಜಯನ ಆಧಿಪತ್ಯದಲ್ಲಿ ಉತ್ತರ ಭಾರತದಿಂದ ಶ್ರೀಲಂಕಾಕ್ಕೆ ಹೇಗೆ ವಲಸೆ ಬಂದರು ಎಂಬುದರ ಕುರಿತು ನಮಗೆ ಒಂದು ಕಥೆಯನ್ನು ನೀಡುತ್ತದೆ. ವಿವರಣೆಯು ಸ್ವಲ್ಪಮಟ್ಟಿಗೆ ಪೌರಾಣಿಕವಾಗಿದ್ದರೂ, ಶ್ರೀಲಂಕಾದಲ್ಲಿ ಉತ್ತರ ಭಾರತದ ಇಂಡೋ-ಆರ್ಯನ್ ಭಾಷೆಗಳಿಗೆ ಸಂಬಂಧಿಸಿದ ಭಾಷೆಯಾದ ಸಿಂಹಳ ಭಾಷೆಯನ್ನು ಮಾತನಾಡುವ ಜನರ ಸ್ಥಾಪನೆಯ ಒಟ್ಟಾರೆ ಕಥೆಯು ಖಂಡಿತವಾಗಿಯೂ

ನಿಜವಾದುದು. ಎರಡನೆಯದಾಗಿ, ಉತ್ತರ ಭಾರತದಲ್ಲಿ ಹುಟ್ಟಿಕೊಂಡ ಬೌದ್ಧಧರ್ಮವನ್ನೇ ಭಾರತದಿಂದ ಶ್ರೀಲಂಕಾಕ್ಕೆ ತರಲಾಯಿತು. *ಮಹಾವಂಶ*ದ ವಿವರಣೆಯ ಪ್ರಕಾರ, ಮೌರ್ಯರ ಕಾಲದಲ್ಲಿ, ಲಂಕೆಯ ರಾಜ ಮತ್ತು ಅವನ ಅನುಯಾಯಿಗಳನ್ನು ಪರಿವರ್ತಿಸಿದ ಬೌದ್ಧ ಸನ್ಯಾಸಿ ಮಹಿಂದ ಎಂಬ ಅಶೋಕನ ಮಗನ ಕಾರಣದಿಂದಾಗಿ ಇದು ಸಂಭವಿಸಿತು. ಬೌದ್ಧಧರ್ಮವು ತನ್ನೊಂದಿಗೆ ಭಾರತೀಯ ರಾಜತ್ವದ ಕಲ್ಪನೆಗಳನ್ನು ತಂದಿದ್ದು, ಬೌದ್ಧಧರ್ಮವನ್ನು ಅಳವಡಿಸಿಕೊಂಡಾಗ ಶ್ರೀಲಂಕಾದ ರಾಜರು ಸಹ ಭಾರತೀಯ ಮಾದರಿಯ ರಾಜತ್ವವನ್ನು ಅನುಸರಿಸಿದಂತೆ ಆಗುತ್ತದೆ. ಮೂರನೆಯದಾಗಿ, ಲಂಕಾದ ರಾಜರು ಆಗಾಗ್ಗೆ ಸಂವಹನ ನಡೆಸುತ್ತಿದ್ದ ದಕ್ಷಿಣ ಭಾರತದ ರಾಜರು ಉತ್ತರ ಭಾರತದ ಮಾದರಿಯ ರಾಜತ್ವದಿಂದ ಪ್ರಭಾವಿತರಾಗಿದ್ದರು: ಅವರು ಯುದ್ಧದ ಆನೆಗಳು, ರಥಗಳು ಮುಂತಾದವುಗಳ ಬಳಕೆಯನ್ನು ಅನುಸರಿಸಿದರು. ಒಟ್ಟಾರೆಯಾಗಿ, ಭಾರತೀಯ ರಾಜತ್ವ ಮತ್ತು ಅದರ ಆಚರಣೆಯ ಸ್ವರೂಪಗಳು ವಿವಿಧ ಮಾರ್ಗಗಳ ಮೂಲಕ ಶ್ರೀಲಂಕಾವನ್ನು ತಲುಪುತ್ತವೆ.

ಉದಾಹರಣೆಗೆ, ಆನೆಗಳು ಮತ್ತು ಕುದುರೆಗಳನ್ನು ಉಲ್ಲೇಖಿಸುವ ಮೊದಲಿನ ಒಂದು ವಾಕ್ಯವೃಂದದಲ್ಲಿ, ಮಧುರೆಯ (ದಕ್ಷಿಣ ಭಾರತದಲ್ಲಿ ಮಧುರೈ) ರಾಜನು ತನ್ನ ಮಗಳು ಮತ್ತು ಅವನ ಮಂತ್ರಿಗಳ ಪುತ್ರಿಯರನ್ನು ರಾಜ ವಿಜಯ ಮತ್ತು ಅವನ ಮಂತ್ರಿಗಳು ಮದುವೆಯಾಗಲೆಂದು ಕಳುಹಿಸಿಕೊಡುತ್ತಾನೆ. ಆ ಮೆರವಣಿಗೆಯನ್ನು ಈ ರೀತಿಯಾಗಿ ವಿವರಿಸಲಾಗಿದೆ: "ಅವನು ಹೀಗೆ ಅನೇಕ ಕನ್ಯೆಯರನ್ನು ಪಡೆದು, ಅವರುಗಳ ಕುಟುಂಬಗಳಿಗೆ ಪರಿಹಾರವನ್ನು ನೀಡಿದ ನಂತರ, ತನ್ನ ಮಗಳನ್ನು ಸಕಲ ಆಭರಣಗಳು, ಪ್ರಯಾಣಕ್ಕೆ ಬೇಕಾದ ಎಲ್ಲವನ್ನೂ ಮತ್ತು ಅವರ ಶ್ರೇಯಾಂಕದ ಪ್ರಕಾರ ಹೊಂದಿಸಿದ ಎಲ್ಲಾ ಕನ್ಯೆಯರು, ರಾಜನಿಗೆ ಯೋಗ್ಯವಾದ (*ರಾಜಾಹಾರಂ ಕಾ ಹತ್ತಸ್ಸರಥಂ*) ಆನೆಗಳು, ಕುದುರೆಗಳು ಮತ್ತು ರಥಗಳೊಂದಿಗೆ ಕಳುಹಿಸಿದನು. ಜೊತೆಗೆ, ಕುಶಲಕರ್ಮಿಗಳು ಮತ್ತು ಹದಿನೆಂಟು ಸಂಘಗಳ ಸಾವಿರ ಕುಟುಂಬಗಳೊಂದಿಗೆ ವಿಜಯಶಾಲಿ ವಿಜಯನಿಗೆ ಒಂದು ಪತ್ರವನ್ನು ಕಳುಹಿಸಿದನು."

*ಮಹಾವಂಶ*ದಲ್ಲಿ, ಧಾರ್ಮಿಕ ಮೂಲತತ್ತ್ವಗಳು ಅಥವಾ ಹಬ್ಬಗಳೊಂದಿಗೆ ಸಂಬಂಧಿಸಿರುವ ರಾಜಮನೆತನದ ಮೆರವಣಿಗೆಗಳ ವಿವರಣೆಯಲ್ಲಿ ಆನೆಗಳು ಮತ್ತು ಚತುರಂಗ ಸೈನ್ಯಗಳ ಬಗೆಗಿನ ಅನೇಕ ನಿದರ್ಶನಗಳು ಕಂಡುಬರುತ್ತವೆ. ಮೆರವಣಿಗೆಯ ದೊಡ್ಡತನ, ಅದರ ಅಂಶಗಳ ಬಹುತ್ವ ಅಥವಾ ಸಂಪೂರ್ಣತೆ, ಮತ್ತು ಸಹಭಾಗಿಗಳ ಅಲಂಕಾರದ ಅದ್ದೂರಿತನವನ್ನು ವರ್ಣಿಸುವ ಅಂತಹ ಭಾಗಗಳು ಮೆರವಣಿಗೆಯಿಂದ ನೀಡಲ್ಪಟ್ಟ ಉನ್ನತ ಗೌರವದ ಸಂಕೇತಗಳನ್ನು ಒದಗಿಸುತ್ತವೆ. ಉದಾಹರಣೆಗೆ, ಮಹಾವಿಹಾರವನ್ನು ಗೌರವಿಸಲು ರಾಜನು ಕೈಗೊಂಡ ಮೆರವಣಿಗೆಯನ್ನು ಈ ರೀತಿಯಾಗಿ ವರ್ಣಿಸಲಾಗಿದೆ: ನಗರ ಮತ್ತು

ವಿಹಾರಕ್ಕೆ ಹೋಗುವ ರಸ್ತೆಯನ್ನು ಅಲಂಕರಿಸಲಾಗಿದೆ ಮತ್ತು ರಾಜನು ತಬಲವನ್ನು ಬಾರಿಸುವಂತೆ ಆದೇಶಿಸುತ್ತಾನೆ. ರಾಜನು ತನ್ನ ರಥದ ಮೇಲೆ ಕುಳಿತು ದಾರಿಯನ್ನು ಮುನ್ನಡೆಸುತ್ತಿದ್ದರೆ, ಅವನ ಮಂತ್ರಿಗಳು ಮತ್ತು ಜನಾನದ (ಹೇರಂ) ಮಹಿಳೆಯರು ಅವನನ್ನು ಅನುಸರಿಸುತ್ತಿದ್ದಾರೆ. ಜೊತೆಗೆ, ರಥಗಳು, ಬಂಡಿಗಳು, ಸೈನಿಕರು, ಆನೆಗಳು ಮತ್ತು ಕುದುರೆಗಳೆಲ್ಲವೂ (*ಸಯೋಗಬಲವಾಹನ*), "ಒಂದು ಬೃಹತ್ ಮೆರವಣಿಗೆ"ಯನ್ನು ರೂಪಿಸಿದ್ದು, ಒಟ್ಟಾರೆಯಾಗಿ ಆ ದೃಶ್ಯವು ಉನ್ನತ ಮಟ್ಟದ ಗೌರವವನ್ನು ನೀಡಲಾಗುತ್ತಿರುವುದರ ಸಂಕೇತವಾಗಿದೆ.

ಬುದ್ಧನು ಜ್ಞಾನೋದಯವನ್ನು ಪಡೆದ ಬೋಧಿ ವೃಕ್ಷವು (ಜ್ಞಾನೋದಯದ ವೃಕ್ಷ) ಚಿಗುರೊಡೆದಾಗ, ಏಳು *ಯೋಜನಾಗಳ* ಉದ್ದ ಮತ್ತು ಮೂರು *ಯೋಜನಾಗಳ* ಅಗಲದ ಚತುರಂಗ ಸೈನ್ಯವು (ಚತುರಂಗಿನಿ ಸೇನಾ) ರಾಜನ ನೇತೃತ್ವದಲ್ಲಿ, ದೊಡ್ಡ ಸನ್ಯಾಸಿಗಳ ಸಮೂಹದೊಂದಿಗೆ ಮೆರವಣಿಗೆಯನ್ನು ರೂಪಿಸುತ್ತದೆ.

ಬುದ್ಧನ ಅವಶೇಷಗಳನ್ನು ತೆಗೆದುಕೊಳ್ಳಲು ಆಯೋಜಿಸಿದ ಮತ್ತೊಂದು ಮೆರವಣಿಗೆಯನ್ನು ಇದೇ ರೀತಿಯ ಪದಗಳಲ್ಲಿ ವಿವರಿಸಲಾಗಿದೆ: “[ರಾಜ], ಮನಸ್ಸಿನಿಂದ ಬಹಳ ಸಂತುಷ್ಟನಾಗಿ, ರಾಜ ಕರ್ತವ್ಯಗಳಲ್ಲಿ ನಿಪುಣನಾಗಿ, ತನ್ನ ಎಲ್ಲಾ ಆಭರಣಗಳಿಂದ ಅಲಂಕರಿಸಿಕೊಂಡು, ಸುತ್ತಲೂ ತನ್ನೆಲ್ಲಾ ನರ್ತಕಿಯರು, ಸಂಪೂರ್ಣ ರಕ್ಷಾಕವಚವುಳ್ಳ ಅವನ ಯೋಧರು, ದೊಡ್ಡ ಪಡೆಗಳು, ಹಾಗೆಯೇ ವಿವಿಧವಾಗಿ ಅಲಂಕೃತವಾದ ಆನೆಗಳು, ಕುದುರೆಗಳು ಮತ್ತು ರಥಗಳಿಂದ (*ಹಾತಿವಾಜಿರಥ*) ಸುತ್ತುವರಿದು, ನಾಲ್ಕು ಶುದ್ಧ ಬಿಳಿ ಸಿಂಧು-ಕುದುರೆಗಳಿಂದ ಎಳೆಯಲ್ಪಟ್ಟ ತನ್ನ ರಾಜ್ಯದ ರಥವನ್ನು ಏರಿ ನಿಂತು, (ಅದ್ದೂರಿಯಾಗಿ) ಅಲಂಕೃತಗೊಂಡ, ಸುಂದರವಾದ ತನ್ನ ಆನೆಯಾದ ಕಂಡೂಲವು ಚಿನ್ನದ ಪೆಟ್ಟಿಗೆಯನ್ನು ಹಿಡಿದು (ಅವಶೇಷಗಳನ್ನು ಸ್ವೀಕರಿಸಲು) ಬಿಳಿಯ ಹಗುರವಾದ ಕೊಡೆಯ ಕೆಳಗೆ ನಿಧಾನ ಗತಿಯಲ್ಲಿ ತನ್ನ ಮುಂದೆ ಚಲಿಸುವಂತೆ ಮಾಡಿದನು. ಧರ್ಮ ಮತ್ತು ಸನ್ಯಾಸಿಗಳ ವರ್ಗವನ್ನು ಗೌರವಿಸಲು ಆಯೋಜಿಸಲಾದ ಮೆರವಣಿಗೆಗಳ ಇಂತಹ ವಿವರಣೆಗಳು, ವಿಶೇಷವಾಗಿ ಮಹಾವಿಹಾರಕ್ಕೆ ಸಂಬಂಧಿಸಿದವುಗಳು, ಧರ್ಮದ ಇತಿಹಾಸದಲ್ಲಿ, ಪ್ರಮುಖವಾದ ಸಂದರ್ಭಗಳಲ್ಲಿ ಮಹತ್ವವನ್ನು ಹೊಂದುತ್ತವೆ. ಈ ರೀತಿಯ ಉದಾಹರಣೆಗಳು *ಮಹಾವಂಶ*ದಲ್ಲಿ ಆಗಾಗ್ಗೆ ಕಂಡುಬರುತ್ತವೆ ಮತ್ತು ಈಗಾಗಲೇ ಇರುವ ಉದಾಹರಣೆಗಳೇ ಇತರವುಗಳ ಉದ್ದೇಶಿತ ಅರ್ಥವನ್ನು ನೀಡುವುದರಿಂದ ಎಲ್ಲಾ ಉದಾಹರಣೆಗಳನ್ನೂ ಒದಗಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಈ ಎಲ್ಲವುಗಳಲ್ಲೂ ಆ ಇಡೀ ಮೆರವಣಿಗೆಯನ್ನು ರೂಪಿಸುವುದರಲ್ಲಿನ ಸಂಪೂರ್ಣತೆ ಮತ್ತು ಆಭರಣಗಳ ಅದ್ದೂರಿತನವು ಉನ್ನತ ಮಟ್ಟದ ಗೌರವವನ್ನು

ಸೂಚಿಸುತ್ತದೆ. ಚತುರಂಗ ಸೈನ್ಯವು ಈ ಸಂಪೂರ್ಣತೆಯ ನಿಯಮಿತ ಲಕ್ಷಣವಾಗಿದೆ ಮತ್ತು ಸಹಜವಾಗಿ ಆನೆಗಳು ಮೆರವಣಿಗೆಯ ಸಂಪೂರ್ಣತೆ ಮತ್ತು ಅದ್ದೂರಿತನ ಎರಡರಲ್ಲೂ ಅತ್ಯಗತ್ಯ ಭಾಗವಾಗಿವೆ.

ಯುದ್ಧಭೂಮಿಯಲ್ಲಿನ ಸೈನ್ಯವನ್ನು ಅದೇ ಭಾಷಾಶೈಲಿಗಳನ್ನು ಬಳಸಿ ವರ್ಣಿಸಲಾಗಿದೆ. ರಾಜ ದತ್ತಗಾಮಣಿಯ ಸೈನ್ಯವು "ರಥಗಳು, ಬಂಡಿಗಳು, ಸೈನಿಕರು, ಕುದುರೆಗಳು ಮತ್ತು ಆನೆಗಳೊಂದಿಗೆ" ಬೋಧಿ ವೃಕ್ಷದ ಚಿಗರೊಡೆಯುವಿಕೆಯನ್ನು ಸ್ವಾಗತಿಸಿದಾಗ ಬಂದಂತೆಯೇ ಬರುತ್ತದೆ; ಇದೇ ರೀತಿಯ ಅಭಿವ್ಯಕ್ತಿಯನ್ನು ಎದುರಾಳಿ ರಾಜನಾದ ಎಲಾರ ದಿ ದಾಮಿಲಾಗೆ (ತಮಿಳು) ಬಳಸಲಾಗುತ್ತದೆ. ಎಲಾರನ ಕಾಲದ ನಂತರ ಅವನ ಸೋದರಳಿಯನು ಅವನ ಸ್ಥಾನವನ್ನು ತೆಗೆದುಕೊಂಡಾಗ, ದತ್ತಗಾಮಣಿಯು ತನ್ನ ಆನೆ ಕಂಡೂಲವನ್ನು ಏರಿ, "ಆನೆಗಳು, ಕುದುರೆಗಳು ಮತ್ತು ರಥಗಳನ್ನು ಏರಿದ ಯೋಧರು ಮತ್ತು ಹೆಚ್ಚಿನ ಸಂಖ್ಯೆಯ ಕಾಲಾಳುಗಳೊಂದಿಗೆ" ಯುದ್ಧಕ್ಕೆ ತೊಡಗುತ್ತಾನೆ. ನಾವು "ನಾಲ್ಕು ಅಂಗಗಳ ಸೈನ್ಯ"ದ ಬಗ್ಗೆ ಎಲ್ಲೋ ಓದಿದ ನೆನಪು. ಹಿಂದಿನ ವಾಕ್ಯದಲ್ಲಿ ಉಲ್ಲೇಖಿಸಿದ ಮನುಷ್ಯರು, ಕುದುರೆಗಳು ಮತ್ತು ಆನೆಗಳನ್ನು ಚತುರಂಗ ಸೈನ್ಯದ ಸಂಕ್ಷಿಪ್ತ ಉಲ್ಲೇಖವಾಗಿ ಅರ್ಥೈಸಬೇಕು ಎಂದು ಇದು ಸ್ಪಷ್ಟಪಡಿಸುತ್ತದೆ: ಡಪ್ಪುಲನು ಪರ್ವತ ದೇಶದಿಂದ ನಗರದಲ್ಲಿ ದೊಡ್ಡ ಕೋಲಾಹಲವನ್ನು ಆವರಿಸುವಂತೆ ಮಾಡಿದ್ದ ದೊಡ್ಡ ಸೇನೆಯನ್ನು ತಂದಾಗ, “ಕುದುರೆಗಳ ಹೇಷಾರವ, ಆನೆಗಳ ಕಹಳೆ, ಡೋಲುಗಳ ದಡಬಡ ಸದ್ದು, ಮತ್ತು ಅವುಗಳ ಲಯಬದ್ಧ ಧ್ವನಿ, ಮತ್ತು ಯೋಧರ ಯುದ್ಧದ ಕೂಗುಗಳು ಆ ಸಮಯದಲ್ಲಿ ಗಗನಮಂಡಲವನ್ನೇ ಸಿಡಿಸುವ ರೀತಿಯಲ್ಲಿತ್ತು.” ಈ ದೃಶ್ಯದಲ್ಲಿ ಚತುರಂಗ ಸೈನ್ಯವು ಸೃಷ್ಟಿಸುವ ಸದ್ದನ್ನು ಬಳಸಿಕೊಂಡು ಅದನ್ನು ಶಬ್ದದ ಮೂಲಕ ಪ್ರದರ್ಶಿಸಲಾಗುತ್ತದೆ – ಇದನ್ನು ಶಬ್ದ ಚಿತ್ರಕಲೆ ಎಂದು ಹೇಳಬಹುದೇನೋ. ಜೊತೆಗೆ, ಭಾರತದ ಶಾಸ್ತ್ರೀಯ/ಪ್ರಾಚೀನ ಸಾಹಿತ್ಯಗಳಲ್ಲಿನ ಶಬ್ದಾರ್ಥಗಳ ಒಂದು ಚಮತ್ಕಾರಪೂರ್ಣ ಪ್ರಯೋಗ ಕೂಡ.

ರಥಗಳು ಗಜಬಾಹುವಿನ (ಆಳ್ವಿಕೆ: 1131-53) ಕಾಲದಷ್ಟು ಗತಕಾಲದಿಂದಲೂ ಬಳಕೆಯಲ್ಲಿಲ್ಲವೆಂದು ನಾವು ಭಾವಿಸಿದ ದೀರ್ಘಕಾಲದ ನಂತರ, ಚತುರಂಗ ಸೈನ್ಯವು ಶ್ರೀಲಂಕಾದ ಯುದ್ಧಭೂಮಿಗಳಲ್ಲಿ ಕಾಣಿಸಿಕೊಳ್ಳುವುದು ಮುಂದುವರಿಯುತ್ತದೆ. ರೋಹಣದ ರಾಜ ಮಾನಾಭರಣನ ಬಳಿ ಮತ್ತು ರಾಜನಾದ ಮೊದಲನೇ ಪರಕ್ಕಮಬಾಹುವಿನ (ಆಳ್ವಿಕೆ: 1153–86) ಕಾಲದ ರಾಜಕುಮಾರ ಮಹಿಂದನ ಬಳಿ ಚತುರಂಗ ಸೈನ್ಯವಿದೆ.ರಥದ ವಿಷಯವನ್ನು ಪರಿಹರಿಸುವುದು ಕಷ್ಟ. ಸಾಮಾನ್ಯ ಯುಗದ ಮೊದಲನೇ ಶತಮಾನದಲ್ಲಿ ಕುಶಾನರ ಮಧ್ಯ ಏಷ್ಯಾದ ಅಶ್ವಸೈನ್ಯ-ಆಧಾರಿತ ಸೈನ್ಯಗಳು ಉತ್ತರ ಭಾರತದಲ್ಲಿ ವಿಜಯದ

ರಾಜ್ಯವನ್ನು ರಚಿಸಿದ ನಂತರ ಭಾರತದ ಯುದ್ಧಭೂಮಿಯಲ್ಲಿ ಇದನ್ನು ಬಳಸುವುದನ್ನು ನಿಲ್ಲಿಸಲಾಯಿತು. ಆದರೆ ದಕ್ಷಿಣ ಭಾರತ ಮತ್ತು ಶ್ರೀಲಂಕಾದಲ್ಲಿ ರಥಯುದ್ಧದ ಬಳಕೆಯು ಯಾವಾಗ ನಿಂತಿತು ಎಂಬ ಬಗ್ಗೆ ನಮಗೆ ಏನೂ ತಿಳಿದಿಲ್ಲ. *ಮಹಾವಂಶ*ದ ಆರಂಭಿಕ ಭಾಗಗಳಲ್ಲಿ ರಥಗಳು ಆಗಾಗ್ಗೆ ಕಾಣಿಸಿಕೊಳ್ಳುತ್ತವೆ; ಒಬ್ಬ ಆರಂಭಿಕ ರಾಜನನ್ನು ನಿಯಮಿತವಾಗಿ ರಥಗಳ ಒಡೆಯ ಎಂಬ ವಿಶೇಷಣದಿಂದ ಉಲ್ಲೇಖಿಸಲಾಗುತ್ತದೆ. ಮುಂದುವರೆದು, ನಾವು ನೋಡಿದಂತೆ, ಚತುರಂಗ ಸೈನ್ಯದ ಕಲ್ಪನೆಯು ಎಷ್ಟು ಹಳೆಯ ಅವಧಿಗಳಲ್ಲಿ ಬಳಸಲಾಗುತ್ತಿತ್ತು ಎಂದರೆ, ಇತರ ಭಾಗಗಳು ಅದನ್ನು ಸಂಕ್ಷಿಪ್ತವಾಗಿ ಸೂಚಿಸಿದ್ದವೇ ಅಥವಾ ಇಲ್ಲವೇ ಎಂಬುದನ್ನು ನಾವು ಖಚಿತವಾಗಿ ಹೇಳಲಾಗುವುದೇ ಇಲ್ಲ. ಸಂಕ್ಷೇಪಣವು ಸೈನ್ಯದ ವರ್ಣನೆಯಲ್ಲಿ ಕುದುರೆಗಳು ಎಂದರೆ ಅಶ್ವದಳವೇ ಅಥವಾ ರಥಗಳೇ ಎಂಬ ಅಸ್ಪಷ್ಟತೆಯನ್ನು ಉಳಿಸುತ್ತಾ ಆನೆಗಳು, ಕುದುರೆಗಳು ಮತ್ತು ಪುರುಷರನ್ನು ಉಲ್ಲೇಖಿಸುವ ರೂಪವನ್ನು ತೆಗೆದುಕೊಳ್ಳಬಹುದು; ಅಥವಾ ಅದು ಕಾಲಾಳುಗಳನ್ನು ಸೂಚ್ಯವಾಗಿರಿಸುತ್ತಾ, ರಥಗಳು, ಕುದುರೆ ಸವಾರರು ಮತ್ತು ಆನೆ ಸವಾರರನ್ನು ಉಲ್ಲೇಖಿಸುವ ರೂಪವನ್ನು ತೆಗೆದುಕೊಳ್ಳಬಹುದು; ರಥದ ಅವಸಾನವನ್ನು ಪತ್ತೆಹಚ್ಚಲು ಪ್ರಯತ್ನಿಸುವಾಗ ಮೊದಲ ಸಂಕ್ಷೇಪಣ ಪ್ರಭೇದವು ಸಮಸ್ಯೆಯಾಗಿದೆ. ಯುದ್ಧಭೂಮಿಯ ರಥವು ಇನ್ನಿಲ್ಲ ಎಂದು ಭಾವಿಸಬೇಕಾದ ಸಮಯದಲ್ಲೂ ಸಹ, , ನಾವು ನೋಡಿದಂತೆ, ಮೆರವಣಿಗೆಯಲ್ಲಿ ಭಾಗವಹಿಸಲು ಬಹುಶಃ ಇಂದಿಗೂ ನಾವು ರಥ ಎಂದು ಕರೆಯಲಾಗುವ ದೇವಾಲಯದ ರಥದ ರೂಪದಲ್ಲಿ ಅನಿರೀಕ್ಷಿತವಾಗಿ ಕಣ್ಣಿಗೆ ಬೀಳುತ್ತದೆ. ರಥವು ಯುದ್ಧದಿಂದ ನಿಶ್ಚಿತವಾಗಿ ಕಣ್ಮರೆಯಾದ ಪರಕ್ಕಮಬಾಹುವಿನ ಕಾಲದಲ್ಲಿಯೂ ಸಹ, ಮತ್ತು ಉದಾಹರಣೆಗೆ, ಯುದ್ಧಭೂಮಿಯನ್ನು ಲೂಟಿ ಮಾಡಿದ ವಿವರಣೆಯಲ್ಲಿ ಆನೆಗಳು ಮತ್ತು ಕುದುರೆಗಳಿದ್ದು, ರಥಗಳಿಲ್ಲದಿದ್ದರೂ ಸಹ, ಸೈನ್ಯದ ನಾಲ್ಕು ಅಂಗಗಳು ಬುದ್ಧನ ಹಲ್ಲಿನ ಅವಶೇಷದ ಮೆರವಣಿಗೆಯ ಅವನ ವರ್ಣನೆಯಲ್ಲಿ ಮತ್ತೆ ಕಾಣಿಸಿಕೊಳ್ಳುತ್ತವೆ. ಇಲ್ಲಿ ಮತ್ತೊಮ್ಮೆ, ನಾವು ಈಗಾಗಲೇ ನೋಡಿರುವ ರೀತಿಯ ಶಬ್ದ ಚಿತ್ರಣವನ್ನು ನೀಡಲಾಗಿದೆ:

ಆನೆಗಳ ಕಹಳೆ ಮತ್ತು ಕುದುರೆಗಳ ಹೇಷಾರವಗಳೊಂದಿಗೆ, ರಥದ ಚಕ್ರಗಳ ಗದ್ದಲ ಮತ್ತು ತಬಲಗಳ ಢಣ ಢಣ ಸದ್ದಿನೊಂದಿಗೆ; ಆನಂದಪರವಶಗೊಳಿಸುವ ಹಬ್ಬದ ಶಂಖನಾದ ಸ್ವರದೊಂದಿಗೆ, ದೊಡ್ಡ ನಗಾರಿಗಳ ಸದ್ದು ಮತ್ತು ಚಾರಣರ ವಿಜಯದ ಕೂಗುಗಳೊಂದಿಗೆ; ಅಭಿನಂದನೆಗಳ ಕೂಗು, ಜೋರಾದ ಚಪ್ಪಾಳೆ ಮತ್ತು ಹರ್ಷಚಿತ್ತದಿಂದ ಅವರು (ಜನರು) ಇಡೀ ನಭವನ್ನೇ ಶಬ್ದದಿಂದ ತುಂಬಿದರು. ರಾಜನು ಸ್ವತಃ ತನ್ನೆಲ್ಲಾ ಆಭರಣಗಳನ್ನು ಧರಿಸಿ, ಚಿನ್ನದ ಹೊದಿಕೆಗಳನ್ನು ಹೊದಿಸಿದ್ದ ತನ್ನ ನೆಚ್ಚಿನ, ಸುಂದರವಾದ ಆನೆಯನ್ನು ಏರಿ, ತಮ್ಮ ಕುದುರೆಗಳನ್ನು ಸವಾರಿ ಮಾಡುತ್ತಿದ್ದ ಅನೇಕ ಗಣ್ಯರಿಂದ ಸುತ್ತುವರೆದು, ಭವ್ಯವಾದ

ಪಟ್ಟಣದಿಂದ ಬಹಳ ವೈಭವದಿಂದ ಅವನು ಹೊರಟು, ಪವಿತ್ರವಾದ ಹಲ್ಲಿನ ಅವಶೇಷ ಮತ್ತು ಅದ್ಭುತವಾದ ಬೋಗುಣಿಯ ಅವಶೇಷಗಳ ಸ್ಥಳಕ್ಕೆ ಬಂದು, ಯೋಗ್ಯ ಶೈಲಿಯಲ್ಲಿ ಕೈಗಳನ್ನು ಹುಬ್ಬಿನ ಮೇಲೆ ಮಡಚಿ, ತನ್ನದೇ ಕೈಗಳಿಂದ ಸಿಹಿ-ಸುವಾಸನೆಯ ಹೂವುಗಳನ್ನು ಅರ್ಪಿಸಿ, ಪೂಜಿಸಿ, ಅವನು ಎರಡೂ ಅವಶೇಷಗಳೊಂದಿಗೆ ತನ್ನ ದಾರಿಯಲ್ಲಿ ಹೋದನು.

ಈ ಮಹಾನ್ ರಾಜನ ಕುರಿತಾದ ದೀರ್ಘ ವಿಭಾಗದಲ್ಲಿ, ಒಂದು ಕಡೆ ನಾವು ಅವನು ಚತುರಂಗ ಸೈನ್ಯವನ್ನು ಹೊಂದಿದ್ದಾನೆ ಎಂದು ಓದುತ್ತೇವೆ: ಉದಾಹರಣೆಗೆ, ರಾಜಧಾನಿಯು "ಆನೆಗಳು, ಕುದುರೆಗಳು ಮತ್ತು ರಥಗಳ ನಿರಂತರ ಸಂಚಾರವನ್ನು ಹೊಂದಿದೆ." ಆದರೆ ಯುದ್ಧಗಳಿಂದ ರಥವು ಕಣ್ಮರೆಯಾದ ನಂತರವೂ ಯುದ್ಧದ ಆನೆಯ ವ್ಯವಸ್ಥೆಯು ಬಹಳ ಕಾಲ ಮುಂದುವರೆದ ಕಾರಣ, ಶ್ರೀಲಂಕಾದಲ್ಲಿ ಅದು ಯಾವಾಗ ಕಣ್ಮರೆಯಾಯಿತು ಎಂಬುದು ಈ ವಿಷಯದ ಮೇಲೆ ಹೆಚ್ಚು ಪರಿಣಾಮ ಬೀರುವುದಿಲ್ಲ.

ಉದ್ಭವಿಸುವ ಮತ್ತೊಂದು ಪ್ರಶ್ನೆಯೆಂದರೆ ಯಾವ ಪ್ರಮಾಣದಲ್ಲಿ ಶ್ರೀಲಂಕಾದ ರಾಜರು ತಮಗೆ ಕುದುರೆಗಳನ್ನು ಪೂರೈಸಿಕೊಳ್ಳುತ್ತಿದ್ದರು ಎಂಬುದು. *ಸೈಂಧವ* ಅಥವಾ ಸಿಂಧುವಿನ (ಸಿಂಧು, ಸಿಂಧೂನದಿಯ ಕೆಳ ಕಣಿವೆ) ಕುದುರೆಯು ಕುದುರೆಗಳಲ್ಲೇ ಅತ್ಯುತ್ತಮವಾದುದು ಎಂಬುದನ್ನು ಸ್ಪಷ್ಟಪಡಿಸುವ ಸಂದರ್ಭಗಳಲ್ಲಿ ಇದನ್ನು ಒಂದಕ್ಕಿಂತ ಹೆಚ್ಚು ಬಾರಿ ಉಲ್ಲೇಖಿಸಲಾಗಿದೆ. ಇದು ಮನೆಯಿಂದ ಬಹಳ ದೂರದಲ್ಲಿದ್ದು, ಆರ್ದ್ರ ಉಷ್ಣವಲಯವು ಇದಕ್ಕೆ ಒಗ್ಗುತ್ತದೆಯೇ ಎಂಬುದು ಒಂದು ಪ್ರಶ್ನೆಯಾಗಿದೆ. ಎಂತಹ ಸಂದರ್ಭದಲ್ಲಿಯೂ, ಕುದುರೆಗಳು ಆನೆಗಳಿಗಿಂತ ಕಡಿಮೆ ಜೀವಿತಾವಧಿಯನ್ನು ಹೊಂದಿರುತ್ತವೆ. ಆದ್ದರಿಂದ ದ್ವೀಪದ ರಾಜರು ಸಂತಾನೋತ್ಪತ್ತಿಯ ಮೂಲಕ ಅವುಗಳ ಸಂಖ್ಯೆಯನ್ನು ನಿರ್ವಹಿಸಲು ಸಾಧ್ಯವಾಗದಿದ್ದರೆ, ಉತ್ತರ ಹುಲ್ಲುಗಾವಲುಗಳಿಂದ ನಿರಂತರವಾಗಿ ಕುದುರೆಗಳ ವ್ಯಾಪಾರವನ್ನು ಮಾಡುವ ಅಗತ್ಯವಿತ್ತು. ಶ್ರೀಲಂಕಾದ ರಾಜನ ದುರ್ಬಲತೆಗಳ ಬಗ್ಗೆ ಕೋಲಾ ರಾಜನಿಗೆ ತಿಳಿಸುತ್ತಾ, ನಿಜಕ್ಕೂ ನಾವು ಕುದುರೆ ವ್ಯಾಪಾರ ಅಥವಾ ಕುದುರೆ ವ್ಯಾಪಾರಿಯ ಬಗ್ಗೆ ಮತ್ತೊಂದು ಕರಾವಳಿಯಿಂದ, ಅಂದರೆ ದಕ್ಷಿಣ ಭಾರತದಿಂದ ಕೇಳುತ್ತೇವೆ. ಯಾರೇ ಆದರೂ, ಈ ವ್ಯಾಪಾರದ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಬಯಸುತ್ತಾರೆ. ಕುದುರೆಗಳು ಅಪರೂಪ ಮತ್ತು ಮೌಲ್ಯಯುತವಾಗಿದ್ದು, ರಾಜ ಮತ್ತು ಅವನ ಸೈನ್ಯಕ್ಕೆ ಮೀಸಲಾಗಿದ್ದವು ಎಂಬುದು ನನ್ನ ಭಾವನೆ.

ಮತ್ತೊಂದೆಡೆ, ಆನೆಗಳ ವಿಷಯದಲ್ಲಿ, ಶ್ರೀಲಂಕಾವು ಬಹಳ ಉತ್ತಮವಾಗಿದ್ದು, ದೊಡ್ಡ, ದಂತವುಳ್ಳ ಗಂಡಾನೆಗಳನ್ನು ಭಾರತದ ರಾಜರು ಹುಡುಕುತ್ತಿದ್ದರು ಎಂಬುದಕ್ಕೆ ಸಾಕ್ಷಿಗಳಿವೆ. *ಮಹಾವಂಶ*ದಲ್ಲಿ, ಮೊದಲನೇ ಪರಕ್ಕಮಬಾಹುವು ಬರ್ಮಾ/ಮ್ಯಾನ್ಮಾರ್‌ನೊಂದಿಗೆ

ಹೊಂದಿದ್ದ ರಾಜತಾಂತ್ರಿಕ ಸಂಬಂಧಗಳ ಕುರಿತು ಅತ್ಯಂತ ಆಸಕ್ತಿದಾಯಕ ಭಾಗವಿದೆ. ಅದನ್ನು ಇಲ್ಲಿ ರಾಮಣ್ಣ ಎಂದು ಕರೆಯಲಾಗಿದೆ. ಲಂಕಾ ಮತ್ತು ರಾಮಣ್ಣದ ರಾಜರುಗಳಿಬ್ಬರೂ ಥೇರವಾಡದ ಬೌದ್ಧಧರ್ಮವನ್ನು ಅನುಸರಣೆ ಮಾಡುತ್ತಿದ್ದರಿಂದ ಅವರು ಉತ್ತಮ ಸಂಬಂಧವನ್ನು ಹೊಂದಿದ್ದು, ಒಬ್ಬರಿಗೊಬ್ಬರು ದೂತರು ಮತ್ತು ಉಡುಗೊರೆಗಳನ್ನು ಕಳುಹಿಸುತ್ತಿದ್ದರು. ಆದರೆ ಅದು ಹೇಗೋ ರಾಮಣ್ಣದ ರಾಜನು ಪರಕ್ಕಮಬಾಹುವಿನ ದೂತರ ವಿರುದ್ದವಾಗಿ "ಚಾಡಿಕೋರರ ಮಾತುಗಳಿಗೆ ಕಿವಿಗೊಟ್ಟು" ಅವರಿಗೆ ಸಾಮಾನ್ಯವಾಗಿ ನೀಡಲಾಗುವ ಜೀವನೋಪಾಯವನ್ನು ತಪ್ಪಿಸಿದನು. ವಿದೇಶಿಗರೊಂದಿಗೆ ಆನೆಗಳ ಖಾಸಗಿ ವ್ಯಾಪಾರವನ್ನು ಕೊನೆಗೊಳಿಸಿ, ರಾಜ ಏಕಸ್ವಾಮ್ಯತೆಯನ್ನು ಸೃಷ್ಟಿಸಿ, ಬೆಲೆಗಳನ್ನು ಗಣನೀಯವಾಗಿ ಹೆಚ್ಚಿಸಿದನು. ರಾಜತಾಂತ್ರಿಕ ಉಡುಗೊರೆಗಳೊಂದಿಗೆ ಬರುವ ಹಡಗಿಗೆ ಆನೆಯನ್ನು ಉಡುಗೊರೆಯಾಗಿ ನೀಡುವ ಅಭ್ಯಾಸವನ್ನು ಅವನು ಕೊನೆಗೊಳಿಸಿದನು. ನಂತರ, ತನಗೆ ಬರೆದ ರಾಜತಾಂತ್ರಿಕ ಪತ್ರದೊಂದಿಗೆ ಬಂದ ಅಂತಹ ಹಡಗನ್ನು ವಶಪಡಿಸಿಕೊಂಡು - ಈ ಪತ್ರವನ್ನು ತನ್ನ ಶತ್ರು ಕಾಂಬೋಡಿಯಾದ ರಾಜನಿಗೆ ಕಳುಹಿಸಲಾಗಿದೆ ಎಂಬ ನೆಪವೊಡ್ಡಿ - ಅವನು ಲಂಕಾದ ದೂತರನ್ನು ಪರ್ವತ ಪ್ರದೇಶದ ಕೋಟೆಯಲ್ಲಿ ಬಂಧಿಸಿ, ಅವರ ಹಣ, ಆನೆಗಳು, ಮತ್ತು ಅವರ ಹಡಗುಗಳನ್ನು ವಶಪಡಿಸಿಕೊಂಡು ಅವರನ್ನು ಕಷ್ಟದ ಕೆಲಸಕ್ಕೆ ದೂಡಿದನು. ಆನೆಗಳನ್ನು ಖರೀದಿಸಲು ಕಳುಹಿಸಲಾದ ಪರಕ್ಕಮಬಾಹುವಿನ ದೂತರಿಂದ ಹಣ ಮತ್ತು ಸರಕುಗಳನ್ನು ತೆಗೆದುಕೊಂಡು ಅದಕ್ಕೆ ಪ್ರತಿಯಾಗಿ ಅವರಿಗೆ ಏನನ್ನೂ ನೀಡದಿರುವುದೂ ಸೇರಿದಂತೆ ಇಂತಹ ಮತ್ತಷ್ಟು ದೌರ್ಜನ್ಯಗಳು ಸಂಭವಿಸಿದವು. ಲಂಕಾದ ರಾಜನು ಸಮುದ್ರದ ಮೂಲಕ ದೊಡ್ಡ ದಂಡಯಾತ್ರೆಯನ್ನು ಕಳುಹಿಸಿ, ರಾಜಧಾನಿಯನ್ನು ವಶಪಡಿಸಿಕೊಂಡು, ರಾಮಣ್ಣದ ರಾಜನನ್ನು ಕೊಂದನು. ಮಹಾನ್ ಪ್ರತೀಕಾರದ ಭಯದಿಂದ, ಜನರು ಮತ್ತಷ್ಟು ಕಠಿಣ ಪರಿಸ್ಥಿತಿಗಳನ್ನು ತಪ್ಪಿಸಲು, ಪರಕ್ಕಮಬಾಹುವಿಗೆ "ಎಷ್ಟು ಬೇಕಾದರೂ" ಆನೆಗಳ ಕಾಣಿಕೆಯನ್ನು ಸಲ್ಲಿಸುತ್ತೇವೆ ಎಂಬ ಸಂದೇಶವನ್ನು ಕಳುಹಿಸಿದರು. ಆನಂತರ, ಒಂದಷ್ಟು ಆನೆಗಳನ್ನು ಕಳುಹಿಸಲಾಯಿತು ಹಾಗೂ "ಅವರುಗಳು ತನ್ನ ಒಪ್ಪಂದಗಳಿಗೆ ನಿಷ್ಠೆಯಿಂದ ಬದ್ಧನಾಗಿದ್ದ ಲಂಕಾದ ರಾಜನೊಂದಿಗೆ ಹೊಸದಾದ ಸ್ನೇಹದ ಒಪ್ಪಂದವನ್ನು ಮಾಡಿಕೊಂಡರು”. ಇಲ್ಲಿ ನಾವು ಆಗ್ನೇಯ ಏಷ್ಯಾ ಮತ್ತು ಶ್ರೀಲಂಕಾದ ಕನಿಷ್ಠ ಥೇರವಾಡ ದೇಶಗಳನ್ನು ಒಳಗೊಂಡಿರುವ ಆನೆಗಳ ಅಂತರರಾಷ್ಟ್ರೀಯ ವ್ಯಾಪಾರವನ್ನು ನೋಡುತ್ತೇವೆ. ವಿವಿಧ ಹಂತಗಳಲ್ಲಿ, ಈ ಕಥೆಯು ವಿಭಿನ್ನ ವಿಧಾನಗಳನ್ನು ಒಳಗೊಂಡಿರುತ್ತದೆ: ಖಾಸಗಿ ವ್ಯಾಪಾರಿಗಳು, ಫಿಯಟ್‌ನಿಂದ ನಿಗದಿಪಡಿಸಿದ ಬೆಲೆಗಳೊಂದಿಗೆ ವ್ಯಾಪಾರದ ರಾಜ ಏಕಸ್ವಾಮ್ಯತೆ, ಮತ್ತು ಕಾಣಿಕೆಯನ್ನು ನೀಡುವ ಮತ್ತು ತೆಗೆದುಕೊಳ್ಳುವ ಮೂಲಕ ವಿನಿಮಯ

ಮಾಡಿಕೊಳ್ಳುವುದು. ಅಂತಹ ವ್ಯಾಪಾರವು ಆಧುನಿಕ ಅರ್ಥದಲ್ಲಿ ಎಂದಿಗೂ ಮುಕ್ತವಾಗಿರದೆ, ಯಾವಾಗಲೂ ಆನೆಗಳ ಬಗ್ಗೆ ಹೆಚ್ಚಿನ ರಾಜ ಆಸಕ್ತಿಯನ್ನು ಹೊಂದಿರುತ್ತದೆ. ವಿಧಾನಗಳು ಖರೀದಿ ಮತ್ತು ಮಾರಾಟದಿಂದ ರಾಜತಾಂತ್ರಿಕ ವಿನಿಮಯವಾಗಿ ಬದಲಾಗಬಹುದು.

. . .

*ಮಹಾವಂಶ*ದ ಕೊನೆಯ ಭಾಗವು ರಾಜ-ರಾಜರ ನಡುವಿನ ಸ್ನೇಹ ಮತ್ತು ಯುದ್ಧ ಸಂಬಂಧಗಳೆರಡರಲ್ಲೂ, ಕೆಲವೊಮ್ಮೆ ನೇರವಾಗಿ, ಕೆಲವೊಮ್ಮೆ ರಾಜ ದೂತರ ಮೂಲಕ, ಕೆಲವೊಮ್ಮೆ ವ್ಯಾಪಾರಿಗಳ ಮೂಲಕ, ಆದರೆ ಎಲ್ಲಾ ಸಮಯದಲ್ಲೂ ರಾಜರ ಹಿತಾಸಕ್ತಿಗಳಿಂದ ನಿರ್ಧರಿಸಲ್ಪಡುತ್ತಾ, ಹೇಗೆ ಆನೆಗಳ ವರ್ಗಾವಣೆ ಆಗುತ್ತಿತ್ತು ಎಂಬುದನ್ನು ತೋರಿಸುತ್ತದೆ.

ದಕ್ಷಿಣ ಏಷ್ಯಾದೊಳಗೆ ಯುದ್ಧದ ಆನೆಯನ್ನು ಪ್ರಸರಿಸಲು ಇದ್ದ ಏಕೈಕ ಪ್ರಮುಖ ಸಾಧನವೆಂದರೆ, ಅದು ಮಗಧ ಸಾಮ್ರಾಜ್ಯ, ನಂದರು ಮತ್ತು ಮೌರ್ಯರ ಅಧೀನದಲ್ಲಿ ಸಾಮ್ರಾಜ್ಯವಾದ ಮಗಧ. ಅದರ ವಿಸ್ತರಣೆಯ ಯಶಸ್ಸು ಯುದ್ಧದ ಆನೆ ಮತ್ತು ಚತುರಂಗ ಸೈನ್ಯದ ಆದರ್ಶವನ್ನು ಹರಡಲು ಬೇರೆಲ್ಲದ್ದಕ್ಕಿಂತ ಹೆಚ್ಚಿನದನ್ನೇ ಮಾಡಿತು. ರೈತರನ್ನು ಯುದ್ಧದಿಂದ ಬೇರ್ಪಡಿಸಿ, ಯೋಧರನ್ನು ಭೂಮಿಯಿಂದ ಬೇರ್ಪಡಿಸಿ, ಮತ್ತು ಯುದ್ಧದ ಸಾಧನಗಳನ್ನು ಏಕಸ್ವಾಮ್ಯಗೊಳಿಸಿಕೊಂಡು, ಮೌರ್ಯರು, ಮಗಧದ ರಾಜರ ಅಧಿಕಾರವನ್ನು ಕೇಂದ್ರೀಕರಣಗೊಳಿಸುವ ಪ್ರವೃತ್ತಿಯನ್ನು ಅತ್ಯುನ್ನತ ಮಟ್ಟಕ್ಕೆ ಕೊಂಡೊಯ್ದರು ಎಂಬುದನ್ನು ಮೆಗಾಸ್ತನೀಸ್‌ನ ಸಾಕ್ಷ್ಯವು ತೋರಿಸುತ್ತದೆ. ನಂತರದಲ್ಲಿ ಬಂದ ರಾಜರು ಮೈಗಡಿಸಿಕೊಂಡಿದ್ದ ಪ್ರವೃತ್ತಿಗಳು ಭಾಗಶಃ ವ್ಯಕ್ತಪಡಿಸಲ್ಪಟ್ಟಿದ್ದಾಗ್ಯೂ, ಅವರು ಈ ನೀತಿಗಳನ್ನು ಪೂರ್ಣವಾಗಿ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕೊನೆಗೆ ಕೃಷಿ ಭೂಮಿಯ ಒಡೆತನದಿಂದ ಸೇನೆಯನ್ನು ಪ್ರತ್ಯೇಕವಾಗಿಡುವುದು ಕಷ್ಟಕರವಾಗಿತ್ತು. ಅಧಿಕಾರಿ ವರ್ಗದ ಸಹಾಯದ ಮೇರೆಗೆ ಭೂ ಆದಾಯವನ್ನು ಇತ್ಯರ್ಥಪಡಿಸುವುದು ಯಾವಾಗಲೂ ಸುಲಭವಾಗಿತ್ತು ಮತ್ತು ಒಮ್ಮೆ ಅದು ಇತ್ಯರ್ಥಗೊಂಡ ನಂತರ ಸಂಪರ್ಕವು ಅನುವಂಶಿಕವಾಗುವುದನ್ನು ತಡೆಯುವುದು ಕಷ್ಟಕರವಾಗಿತ್ತು. ಇಡೀ ಜನಸಂಖ್ಯೆಯ ಅನುಪಾತವನ್ನು ಪರಿಗಣಿಸಿದರೆ, ರೈತರ ಸಂಖ್ಯೆಯು ಬಹಳ ಗಣನೀಯವಾಗಿದ್ದು, ಅವರನ್ನು ಎಂದಿಗೂ ಯುದ್ಧದಿಂದ ಸಂಪೂರ್ಣವಾಗಿ ಹೊರಗಿಡಲು ಸಾಧ್ಯವಿರಲಿಲ್ಲ. ಆದರೆ ಆನೆಗಳು ಮತ್ತು ಕುದುರೆಗಳಿಗೆ ಸಂಬಂಧಿಸಿದಂತೆ, ಏಕಸ್ವಾಮ್ಯತೆ ಅಥವಾ ಕನಿಷ್ಠಪಕ್ಷ ಮಾಲೀಕತ್ವವನ್ನು ನಿಯಂತ್ರಿಸುವ ರಾಜರ ಪ್ರವೃತ್ತಿಯು ಅನೇಕ ಬಾರಿ ಕಾಣಿಸಿಕೊಳ್ಳುತ್ತದೆ ಮತ್ತು ಇದನ್ನು ಭಾರತೀಯ ರಾಜತ್ವದ ದೀರ್ಘಾವಧಿಯ ಪ್ರವೃತ್ತಿ ಎಂದು ಪರಿಗಣಿಸಬಹುದು.

ಆನೆಯ ಬೇಟೆಗಾರರು, ತರಬೇತುದಾರರು, ಚಾಲಕರು ಮತ್ತು ವೈದ್ಯರಿಂದ ಸ್ಥಳೀಯ ವೈದ್ಯರಿಗೆ ಈ ವಿಶೇಷ ಪಾಂಡಿತ್ಯಗಳ ಜ್ಞಾನ ವರ್ಗಾವಣೆ ಆಗಿರುವ ಬಗ್ಗೆ ಪುರಾತನ ಮೂಲಗಳಿಂದ ನಮ್ಮ ಬಳಿ ನೇರ ಸಾಕ್ಷಿಗಳಿಲ್ಲ. ಆದರೆ ಸಾಂದರ್ಭಿಕ ಸಾಕ್ಷಿಗಳು ಗಣನೀಯವಾಗಿದ್ದು, ಹೆಲೆನಿಸ್ಟಿಕ್ ಮೂಲಗಳಲ್ಲಿ ನೇರ ಸಾಕ್ಷಿಗಳನ್ನು ಹೊಂದಿದ್ದೇವೆ. ಇದನ್ನು ನಾವು ಮುಂದಿನ ಅಧ್ಯಾಯದಲ್ಲಿ ನೋಡುತ್ತೇವೆ. ಅರಣ್ಯವಾಸಿಗಳಿಂದ ಹೆಚ್ಚಾಗಿ ನೇಮಕಗೊಳ್ಳುವ ಈ ರೀತಿಯ ಪರಿಣಿತರು, ವಿವಿಧ ಭಾಷೆಗಳನ್ನು ಮಾತನಾಡುತ್ತಾರೆ. ಅವರು ಯುದ್ಧದ ಆನೆ ಮತ್ತು ಯುಗಗಳಾದ್ಯಂತ ಮತ್ತು ಯುರೇಷಿಯಾದ ವಿಶಾಲ ಪ್ರದೇಶದ ವಿವಿಧ ಸ್ಥಳಗಳು ಮತ್ತು ಸಂಸ್ಕೃತಿಗಳಲ್ಲಿ ಕೈಗೊಂಡ ಅದರ ಆರೈಕೆ ಮತ್ತು ನಿರ್ವಹಣೆಯ ಕುರಿತಾದ ಜ್ಞಾನವನ್ನು ಸ್ವಯಂಪ್ರೇರಿತವಾಗಿ ಮರುಶೋಧಿಸಲಿಲ್ಲ. ಎಲ್ಲಾ ಸಾಕ್ಷಿಗಳಿಗೂ ಮಿಗಿಲಾದದ್ದು, ಆ ಜ್ಞಾನಶಕ್ತಿಯ ವಿಷಯವೇ ಆಗಿದೆ - ಸೆರೆಹಿಡಿಯುವಿಕೆ, ತರಬೇತಿ, ಆರೈಕೆ ಮತ್ತು ನಿರ್ವಹಣೆಯ ತಂತ್ರಗಳು ಮತ್ತು *ಅಂಕುಶ*ದಂತಹ ಅಭ್ಯಾಸದ ಸಾಧನಗಳು.

ಯುದ್ಧದ ಆನೆಯು ಸ್ಥಾನವೊಂದನ್ನು ಕಂಡುಕೊಳ್ಳುವ, ರೂಢಿಯ ಮೂರು ಸ್ವರೂಪಗಳಾದ ಚತುರಂಗ ಸೈನ್ಯ, ಯುದ್ಧ ವ್ಯೂಹ ರಚನೆ ಮತ್ತು ರಾಜರ ಸಾಗಣೆಯಲ್ಲಿ, - ಮೊದಲ ಮತ್ತು ಕೊನೆಯದು ದಕ್ಷಿಣ ಏಷ್ಯಾ ಪ್ರದೇಶದಾದ್ಯಂತ ಹೇರಳವಾಗಿ ಕಾಣಸಿಗುತ್ತವೆ; ಮತ್ತು ಸಹಜವಾಗಿ ಯುದ್ಧದ ಆನೆಗಳು ರಥದ ಹಳತಾಗುವಿಕೆಯೊಂದಿಗೆ ಚತುರಂಗ ಸೈನ್ಯವನ್ನು ಮುಮ್ಮಡಿ ಸೈನ್ಯವಾಗಲು ದಾರಿ ಮಾಡಿಕೊಟ್ಟ ನಂತರವೂ ಮೂಲಗಳಲ್ಲಿ ದಾಖಲಾಗುವುದು ಮುಂದುವರೆಯುತ್ತದೆ. ಅವುಗಳಲ್ಲಿ ಅತ್ಯಂತ ತಾಂತ್ರಿಕವಾದ, ಯುದ್ಧ ವ್ಯೂಹ ರಚನೆಯು, ಸಂಸ್ಕೃತ ಮಹಾಕಾವ್ಯಗಳು ಮತ್ತು *ಅರ್ಥಶಾಸ್ತ್ರ*ದಂತಹ ಕೈಪಿಡಿಗಳ ಹೊರಗೆ ಅತ್ಯಂತ ಕಡಿಮೆ ಕುರುಹುಗಳನ್ನು ಬಿಡುತ್ತದೆ. ಆದರೆ, ನಾವು ಮುಂದೆ ನೋಡುವಂತೆ, ಇದು ಆಗ್ನೇಯ ಏಷ್ಯಾದಲ್ಲಿ ಸಾಕಷ್ಟು ನಂತರದ ದಿನಗಳಲ್ಲಿ ಸ್ಪಷ್ಟವಾಗಿ ಕಾಣಿಸಿಕೊಂಡು, ದೀರ್ಘಾವಧಿಯ ಮತ್ತು ವಿಶಾಲವಾದ ಭೌಗೋಳಿಕ ವ್ಯಾಪ್ತಿಯ ಗುಪ್ತ ಇತಿಹಾಸದ ಬಗ್ಗೆ ಹೇಳುತ್ತದೆ.